ಕನ್ನಡ ಮಾಸಿಕ

ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಪ್ರಕಟಣೆ

SHETTIGARA VAANI

# ಶೆಟ್ಟಿಗಾರ ವಾಣಿ

ಬೆಂಗಳೂರು ನಿವಾಸಿ ಕರಾವಳಿ ಮೂಲದ ಶೆಟ್ಟಿಗಾರ ಸಮಾಜದ ಮುಖವಾಣಿ

ಸಂಪುಟ: 2 | ಸೆಪ್ಟೆಂಬರ್ 2025 | ಸಂಚಿಕೆ: 3 | ಪುಟಗಳು: 12

**ಸಂಪಾದಕ ಮಂಡಳಿ**

ಶ್ರೀ ನಾರಾಯಣ ಶೆಟ್ಟಿಗಾರ್
ಶ್ರೀ ಮಾಧವ ಶೆಟ್ಟಿಗಾರ್, ಯು
ಶ್ರೀ ಪ್ರಕಾಶಚಂದ್ರ ಆತ್ರಾಡಿ
ಶ್ರೀ ಪ್ರಭಾಕರ ಶೆಟ್ಟಿಗಾರ್, ಎಂ
ಶ್ರೀ ಮಾಧವ ಶೆಟ್ಟಿಗಾರ್, ಶೆಟ್ಟಿಗಾಡು
ಶ್ರೀ ಸುಂದರ ಎಸ್ ಶೆಟ್ಟಿಗಾರ್, ಎಕ್ಕಾರ್
ಶ್ರೀ ದೊಂಬಯ್ಯ ಶೆಟ್ಟಿಗಾರ್
ಶ್ರೀಮತಿ ಬಾನುಮತಿ ಡಿ ಶೆಟ್ಟಿಗಾರ್
ಸಿ.ಎ. ವಿಶ್ರಾಂತ್ ಬಿ ಎಲ್
ಶ್ರೀ ಯತೀಶ್ ಎಲ್. ಶೆಟ್ಟಿಗಾರ್
ಶ್ರೀಮತಿ ಉಷಾ ಚೇತನ್

**ವಿನ್ಯಾಸ ಮತ್ತು ತಂತ್ರಜ್ಞಾನ ನೆರವು**

ಶ್ರೀ ಯಶಸ್ವಿ ಜೆ
ಶ್ರೀ ರಾಮಕೃಷ್ಣ ಸಾಲಿಕೇರಿ

**ವಿಳಾಸ**

ಶೆಟ್ಟಿಗಾರವಾಣಿ, C/o ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ),
ನಂ.8, ಶಾಂತವೇರಿ ಗೋಪಾಲಗೌಡ ನಗರ,
4ನೇ ಅಡ್ಡ ರಸ್ತೆ, ಮೂಡಲಪಾಳ್ಯ, ಬೆಂಗಳೂರು-560072

ಮೊಬೈಲ್: 9535443311
ಇಮೇಲ್: dkpadmashalibng@gmail.com
ವೆಬ್ ಸೈಟ್: www.dkpadmashalibng.in

ಸೂಚನೆ: ಇಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಲೇಖಕರ ವೈಯಕ್ತಿಕ ಅಭಿಪ್ರಾಯಗಳು ಮಾತ್ರ; ಪತ್ರಿಕೆಯ ಅಥವಾ ಕೂಟದ ಅಭಿಪ್ರಾಯಗಳಲ್ಲ.



ಕೃತಕ ಬುದ್ಧಿಮತ್ತೆಯಿಂದ ರಚಿಸಿದ ಚಿತ್ರ - ಛಾಯಾಚಿತ್ರ ಕ್ರೆಡಿಟ್ ಅಗತ್ಯವಿಲ್ಲ.

## ಕೃಷಿಕರಿಗೇಕೆ ಹೆಣ್ಣು ಸಿಗುತ್ತಿಲ್ಲ?

ಒಂದು ಕಾಲದಲ್ಲಿ, "ಕೆಟ್ಟು ಪಟ್ಟಣ ಸೇರು"ಎನ್ನುವ ನಾಣ್ಣುಡಿ ಪ್ರಚಲಿತವಾಗಿತ್ತು. ಆಗ, ಪಟ್ಟಣಕ್ಕೆ ಹೋಗಿ ನೆಲೆ ಹುಡುಕುವವರಿಗೆ, ಹಳ್ಳಿಯಲ್ಲಿ ಬದುಕು ಕಟ್ಟಿಕೊಳ್ಳಲು ವಿಫಲರಾದವರು, ಎನ್ನುವ ತಿರಸ್ಕಾರವಿತ್ತು. ಆದ್ದರಿಂದ, ದೂರದ ಪಟ್ಟಣವಾಸಿಗಳಿಗೆ ಹೆಣ್ಣು ಕೊಡಲು ಹಳ್ಳಿಯವರು ಹಿಂದೆ ಮುಂದೆ ನೋಡುತ್ತಿದ್ದರು. ಹಳ್ಳಿಯಲ್ಲಾದರೆ, ನೆಮ್ಮದಿಯ ವ್ಯವಸ್ಥಿತ ಬಾಳ್ವೆಗೆ ಏನೂ ಕೊರತೆಯಿಲ್ಲ, ಪಟ್ಟಣವೆಂದರೆ, ಬೇರು ಕಿತ್ತಂತಹ ಅಸ್ಥಿರ ಬದುಕು ಎನ್ನುವ ಮನಸ್ಥಿತಿಯಿತ್ತು.  ಆದರೆ, ಇಂದು ಪರಿಸ್ಥಿತಿ ಸಂಪೂರ್ಣ ತದ್ವಿರುದ್ಧವಾಗಿದೆ. ಪಟ್ಟಣವೆಂದರೆ ಸುಸ್ಥಿರ ಬದುಕು ನೀಡುವ ಮತ್ತು ಹಳ್ಳಿಗಳೆಂದರೆ ಮೂಲಭೂತ ವ್ಯವಸ್ಥೆಗಳಿಲ್ಲದ ತಾಣವೆನ್ನುವ ಜನಾಭಿಪ್ರಾಯವಿದೆ.  ಒಟ್ಟಿನಲ್ಲಿ, ಹಳ್ಳಿಗಳನ್ನು ಅನಕ್ಷರತೆ, ಅಜ್ಞಾನ, ಬಡತನ, ನಿರುದ್ಯೋಗ ಮತ್ತು ಅಸಮಾನತೆಗಳಂತಹ ಗಂಭೀರ ಸಮಸ್ಯೆಗಳನ್ನು ಒಳಗೊಂಡ ದುಸ್ಥಿರ ಬದುಕು ನೀಡುವ ಪ್ರದೇಶವೆಂದು ಗುರುತಿಸುತ್ತೇವೆ. ಹಳ್ಳಿಗಳಿಂದ ಪಟ್ಟಣಗಳಿಗೆ ನಾನಾ ಕಾರಣಗಳಿಂದ ವಲಸೆ ಹೆಚ್ಚಾಗಿರುವುದರಿಂದ, ಮಹಿಳೆಯರ, ಹಾಗೂ ಕೆಳಜಾತಿ  ಮತ್ತು ವರ್ಗಗಳ ಜನಸಾಮಾನ್ಯರ ಪರಿಸ್ಥಿತಿ  ಕೊಂಚ ಸುಧಾರಿಸಿರುದೇನೋ ನಿಜ. ಆದರೆ, ಖಾಲಿ ಹೊಡೆಯುತ್ತಿರುವ ಹಳ್ಳಿಗಳು ಇನ್ನಷ್ಟು ಅಧೋಮುಖ ಕಾಣದಂತೆ ತಡೆಯುವುದು ಹೇಗೆ?

ಇಂದು ಹಳ್ಳಿಗಳು ಎದುರಿಸುತ್ತಿರುವ ನಾನಾ ಸಮಸ್ಯೆಗಳ  ನಡೆಯುತ್ತಿರುವ ವಿಸ್ಮಯದ ವಿದ್ಯಮಾನವೆಂದರೆ, ಜನನಿಬಿಡ ನಗರಗಳಲ್ಲಿ ವಾಸವಾಗಿರುವ  ಉದ್ಯೋಗಸ್ಥ ಜನರು, ತಮ್ಮ ಬಿಡುವಿನ ವೇಳೆಯನ್ನು ಮತ್ತು ವಾರಾಂತ್ಯಗಳನ್ನು ಹಳ್ಳಿಗಳಲ್ಲಿ ಕಳೆಯಲು ಇಷ್ಟಪಡುವುದು. ಪಟ್ಟಣದವರ ಈ ತಾತ್ಕಾಲಿಕ ಖಯಾಲಿಗಳನ್ನು ಪೂರೈಸಲು ಹಳ್ಳಿಗಳಲ್ಲಿ ಹೋಮ್ ಸ್ಟೇ ಗಳು ಹೆಚ್ಚಾಗುತ್ತಿದ್ದು, ಇದೊಂದು ಲಾಭದಾಯಕ  ವ್ಯವಹಾರವಾಗಿ ಪರಿವರ್ತನೆಯಾಗಿದೆ. ಗಾಂಧಿ, ದೇಶದ ಹಳ್ಳಿಗಳು ಸ್ವಾವಲಂಬನೆ ಸಾಧಿಸಿ, ದೇಶದ ಆರ್ಥಿಕತೆಯ ಕೇಂದ್ರಬಿಂದುವಾಗಬೇಕೆಂದು ಆಶಿಸಿದ್ದರು. ಈ ನಿಟ್ಟಿನಲ್ಲಿ, ಇಂದು ನಗರವಾಸಿಗಳು ತಮ್ಮ

ಸ್ಪರ್ಧಾತ್ಮಕ ಜಂಜಾಟಗಳ ನಡುವೆ ನೆಮ್ಮದಿಯನ್ನು ಅರಸಿಕೊಂಡು ಹಳ್ಳಿಗಳಿಗೆ ಭೇಟಿ ನೀಡುತ್ತಿರುವುದು ಒಂದು ಉತ್ತಮ ಬೆಳವಣಿಗೆಯೆನ್ನಬಹುದು. ಆದರೆ, ವಿಷಾದದ ಸಂಗತಿಯೆಂದರೆ ನಗರವಾಸಿಗಳ ಆತಿಥ್ಯ, ವಸತಿ, ಮತ್ತು ಮನೋರಂಜನೆಗಳನ್ನು ನಿರ್ವಹಿಸಿ ದುಡ್ಡು ಮಾಡುತ್ತಿರುವವರು ಪಟ್ಟಣವಾಸಿಗಳೇ ಹೊರತು ಸ್ಥಳೀಯರಲ್ಲ.

ಇವುಗಳ ನಡುವೆ ಹಳ್ಳಿಯಲ್ಲಿ ಬದುಕು ಕಟ್ಟಿಕೊಳ್ಳಬೇಕೆಂದು ನಗರವಾಸಿ ಯುವಕರು ತಮ್ಮ ಉತ್ತಮ ಸಂಪಾದನೆಯ ಉದ್ಯೋಗಗಳನ್ನು ತ್ಯಜಿಸಿ ಹಳ್ಳಿಗಳಲ್ಲಿ ಪ್ರಯೋಗಾತ್ಮಕ ಕೃಷಿ, ತೋಟಗಾರಿಕೆ ಮತ್ತು ಪೂರಕ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಾಹಸಕ್ಕೆ ಮುಂದಾಗುತ್ತಿರುವುದು  ಹೆಚ್ಚಾಗುತ್ತಿದೆ.

ಇವುಗಳ ನಡುವೆ ಇಂದು ಹಳ್ಳಿಯಲ್ಲಿ ನೆಲೆ ನಿಂತಿರುವ ಗಂಡು ಮಕ್ಕಳು ಎದುರಿಸುತ್ತಿರುವ ಬಹು ದೊಡ್ಡ ಸಮಸ್ಯೆಯೆಂದರೆ, ಮದುವೆಗೆ ಹೆಣ್ಣು ಸಿಗದಿರುವುದು. ಈ ಸಮಸ್ಯೆ ದಿನದಿಂದ ದಿನಕ್ಕೆ ಬೃಹದಾಕಾರವಾಗಿ ಬೆಳೆಯುತ್ತಿದೆ. ಹಳ್ಳಿಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಬೇಕಾದರೆ, ಈ ಸಮಸ್ಯೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸೂಕ್ತ ಮಾರ್ಗಗಳನ್ನು ಕಂಡುಕೊಳ್ಳಬೇಕಾಗಿದೆ. ಇದೊಂದು, ಸಮಾಜದಲ್ಲಿ ಆಗಬೇಕಾದ ಮಾನಸಿಕ ಪರಿವರ್ತನೆ ಮತ್ತು ಹಳ್ಳಿಗಳ ಮೂಲಭೂತ ಸೌಲಭ್ಯಗಳ ಸುವ್ಯವಸ್ಥೆ.

ಮೊದಲನೆಯದಾಗಿ, ಮದುವೆಗೆ ಹೆಣ್ಣು ಸಿಗುವುದಿಲ್ಲವೆಂದರೆ, ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆಯೇ?  ಸಧ್ಯ ಭಾರತದಲ್ಲಿ ಗಂಡು-ಹೆಣ್ಣಿನ ಸಂಖ್ಯಾ ಅನುಪಾತವು 48.4 ಶೇಕಡಾ ಮಹಿಳೆಯರಿಗೆ, 51.6 ಶೇಕಡಾ ಪುರುಷರಷ್ಟಿದೆ. ಈ ಮೂರು ಶೇಕಡಾ ಅಸಮತೋಲನದಿಂದ ವಧುಗಳ ಬರಗಾಲವಾಗಿದೆಯೇ? ಖಂಡಿತವಾಗಿಯೂ, ಇದೊಂದೇ ಕಾರಣವಲ್ಲ. ಸಾಕಷ್ಟು ಇನ್ನಿತರ ಕಾರಣಗಳಿವೆ: ಹೆಣ್ಣು ಮಕ್ಕಳು ಉನ್ನತ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ನಗರಗಳತ್ತ ವಲಸೆ ಹೋಗುತ್ತಿರುವುದು ಹೆಚ್ಚಾಗಿದೆ, ಹಳ್ಳಿಯಲ್ಲಿ ಮಹಿಳೆಯರ ಮೇಲೆ ಹೇರುವ ಶಿಷ್ಟಾಚಾರಗಳು, ಜಾತಿ ವ್ಯವಸ್ಥೆ, ಕೃಷಿಗೆ ಇಲ್ಲದ ಗೌರವ, ರೈತರ ಆತ್ಮಹತ್ಯೆ, ಉನ್ನತ ಶಿಕ್ಷಣದಲ್ಲಿ ಆಸಕ್ತಿ ಕಳೆದುಕೊಂಡ ಹಳ್ಳಿಯ ಗಂಡುಮಕ್ಕಳು, ಹೆಣ್ಣುಮಕ್ಕಳಲ್ಲಿ ಕೃಷಿಯ ಕುರಿತು ನಿರಾಸಕ್ತಿ, ಹಳ್ಳಿಗಳಲ್ಲಿ ಹೆಣ್ಣುಮಕ್ಕಳಿಗೆ ಇಲ್ಲದ ವೈಯಕ್ತಿಕ ಸ್ವಾತಂತ್ರ್ಯ, ಇತ್ಯಾದಿಗಳು.

ಕಳೆದ ಹಲವಾರು ವರುಷಗಳಿಂದ ದೇಶದ ಉನ್ನತ ಶಿಕ್ಷಣದಲ್ಲಿ ಕಂಡುಬರುತ್ತಿರುವ ವಿದ್ಯಮಾನವೆಂದರೆ, ತರಗತಿಗಳಲ್ಲಿ ಗಂಡು ಮಕ್ಕಳಿಗೆ ಹೋಲಿಸಿದರೆ, ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ, ಉದ್ಯೋಗ ಕ್ಷೇತ್ರದಲ್ಲಿ ಅದೇ ಪ್ರಮಾಣದಲ್ಲಿ ಹೆಣ್ಣು ಮಕ್ಕಳನ್ನು ನಾವು ಕಾಣುತ್ತಿಲ್ಲ. ಹಾಗಿದ್ದರೆ, ಹೆಣ್ಣು ಮಕ್ಕಳು ಎಲ್ಲಿ ಕಳೆದುಹೋಗುತ್ತಾರೆ? ಇಂದಿಗೂ, ಹೆಚ್ಚಿನ ಹೆತ್ತವರು ತಮ್ಮ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿರುವುದು, ಅವರು ಉದ್ಯೋಗ ಪಡೆಯಲಿ ಎಂದಲ್ಲ, ಬದಲಾಗಿ ಒಳ್ಳೆಯ ಕೆಲಸದಲ್ಲಿರುವ ಗಂಡು ಸಿಗಲಿ ಎಂದು. ಹಾಗಾಗಿ, ಕಡಿಮೆ ವಿದ್ಯಾಭ್ಯಾಸ ಮಾಡಿದ ಹುಡುಗರಿಗೆ ಹೆಣ್ಣು ಸಿಗುವುದು ಸ್ವಲ್ಪ ಕಷ್ಟವೇ. ನಗರಗಳಲ್ಲಿ ವಾಸಿಸುವ ಉದ್ಯೋಗಸ್ಥ, ಕಡಿಮೆ ಶಿಕ್ಷಣ ಮಟ್ಟದ ಹುಡುಗರಿಗೆ ಒಂದು ವೇಳೆ ಹೆಣ್ಣು ಸಿಗಬಹುದು. ನಗರಗಳಲ್ಲಿ ಹೆಣ್ಣುಮಕ್ಕಳಿಗೂ ಕೂಡ ಕೆಲಸಕ್ಕೆ ವಿಪುಲ ಅವಕಾಶಗಳಿರುವುದರಿಂದ, ಇಬ್ಬರೂ ದುಡಿದರೆ ಹೇಗೋ ಸಂಸಾರ ನಿರ್ವಹಿಸುತ್ತಾರೆ ಎನ್ನುವ ಧೈರ್ಯ ತೆಗೆದುಕೊಳ್ಳುತ್ತಾರೆ. ಆದರೆ, ಹಳ್ಳಿಯಲ್ಲಿ ಕೃಷಿಯನ್ನು ಹೊರತು ಪಡಿಸಿ ಅನ್ಯ ಉದ್ಯೋಗಗಳ ಕೊರತೆಯಿರುವುದರಿಂದ ಮತ್ತು ಕೃಷಿ ಅವಲಂಬನೆ ಸದಾ ಅನಿಶ್ಚಿತತೆಗಳಿಂದ ಕೂಡಿರುವುದರಿಂದ, ಹೆಣ್ಣು ಮಕ್ಕಳು ಮತ್ತು ಅವರ ಹೆತ್ತವರು ಹಳ್ಳಿಗಳಲ್ಲಿ ಭವಿಷ್ಯ ಕಳೆಯುವ ಮನಸ್ಸು ಮಾಡುವುದು ದುರ್ಲಭ.

ಇನ್ನು, ಹಳ್ಳಿಯಲ್ಲಿ ಮಹಿಳೆಯರ ಮೇಲೆ ವಿಶೇಷವಾಗಿ ಹೇರುವ ಆಚರಣೆಗಳು, ಸಂಪ್ರದಾಯಗಳು, ಶಿಷ್ಟಾಚಾರಗಳು, ಪದ್ಧತಿಗಳು, ಅರಿವು ಕಂಡುಕೊಂಡ ಹೆಣ್ಣುಮಕ್ಕಳಿಗೆ  ಹೋಲಿಸಿದರೆ, ಪಟ್ಟಣಗಳಲ್ಲಿ ಹೆಣ್ಣುಮಕ್ಕಳಿಗೆ ಸಂಪ್ರದಾಯಗಳನ್ನು ಅನುಸರಿಸುವ ಅಥವಾ ಮಾಡದಿರುವ  ವೈಯಕ್ತಿಕ ಸ್ವಾತಂತ್ರ್ಯ ಹೆಚ್ಚಿದೆಯೆನ್ನಬಹುದು.

ಇನ್ನು ಅತಿಯಾದ ಜಾತಿ ವ್ಯವಸ್ಥೆ ಹಳ್ಳಿಗಳ ದೈನಂದಿನ ಜೀವನದ ಭಾಗವಾಗಿರುವುದರಿಂದ ಕೆಳಜಾತಿಯ ಹೆಣ್ಣುಮಕ್ಕಳು ಹಳ್ಳಿಗಳಲ್ಲಿ ನೆಲೆ ನಿಲ್ಲಲು  ತೋರಿಸದಿರಬಹುದು. ನಗರಗಳೇನೂ ಜಾತಿ ನಿಂದನೆಯಿಂದ ಮುಕ್ತವಾಗಿಲ್ಲ  ನಿಜ, ಆದರೆ ಹಳ್ಳಿಗಳಂತೆ ನಿರ್ಭೀತಿಯಿಂದ ಆಚರಿಸುವಷ್ಟು ಧೈರ್ಯ ತೋರುವುದು ಬಹಳ ಕಡಿಮೆ, ಬದಲಾಗಿ ತೆರೆಮರೆಯಲ್ಲಿ ನಡೆದುಹೋಗುತ್ತದೆ.

ರೈತರನ್ನು ಅನ್ನದಾತ,  ದೇಶದ ಬೆನ್ನೆಲುಬು ಎನ್ನುವ ಗೌರವ ಸೂಚಕ ವ್ಯಾಖ್ಯಾನಗಳ ನಡುವೆ  ಇಂದು ಕೃಷಿಕರಿಗೆ ಸಿಗುವ ಗೌರವ ಕಡಿಮೆಯಾಗುತ್ತಿದೆ. ಮಾಧ್ಯಮಗಳಲ್ಲಿ ರೈತರೆಂದರೆ, ಬಡವರು, ಆರ್ಥಿಕವಾಗಿ ದಿವಾಳಿಯಾಗಿರುವವರು ಮತ್ತು ಹತಾಶೆಗೊಂಡು ಆತ್ಮಹತ್ಯೆ ಮಾಡಿಕೊಳ್ಳುವವರು ಎನ್ನುವ ಅಭಿಪ್ರಾಯ ಪ್ರಚಾರಗೊಂಡಷ್ಟು ರೈತರಿಗೆ ಹೆಣ್ಣು ಸಿಗುವುದು ಕಷ್ಟವಾಗುತ್ತಿದೆ. ಪ್ರಸಕ್ತ, ಕೃಷಿಕರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೆ, ಕೃಷಿಯಲ್ಲಿ ಇನ್ನಷ್ಟು ಯುವಕರು ತೊಡಗಿಸಿಕೊಳ್ಳಲು, ಯಶಸ್ವೀ ರೈತರ ಕುರಿತು ಸುದ್ದಿಗಳು ಮತ್ತು ಅವರು ಮಾಡುತ್ತಿರುವ ವಿಭಿನ್ನ ಪ್ರಯೋಗಗಳ ಮಾಹಿತಿ ಹೆಚ್ಚು ಪ್ರಸಾರವಾಗುವುದು ಕೂಡಾ ಮುಖ್ಯ. ಇದು ರೈತರಿಗೆ ಕೃಷಿಯಲ್ಲಿ ಮುಂದುವರಿಯಲು ಭರವಸೆ ನೀಡುತ್ತದೆ.

ಸಾಮಾನ್ಯವಾಗಿ, ನಮ್ಮ ಸಮಾಜದಲ್ಲಿ ಮದುವೆಯಾಗುವಾಗ  ಗಂಡು ಹೆಣ್ಣಿಗಿಂತ ಹೆಚ್ಚು ಶಿಕ್ಷಣ ಹೊಂದಿರಬೇಕೆಂಬ ನಿರೀಕ್ಷೆ ಇದೆ. ಇದು ಬದಲಾಗಬೇಕಾದ ಸಂದರ್ಭವಿದು. ಇದು  ಉನ್ನತ ಶಿಕ್ಷಣದಲ್ಲಿ ಗಂಡಿಗಿಂತ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಿದೆ.  ಹಾಗಾಗಿ, ಅನಿವಾರ್ಯವಾಗಿ ಮದುವೆಯಾಗ ಬಯಸುವ  ಹೆಣ್ಣುಮಕ್ಕಳು ತಮಗಿಂತ ಕಡಿಮೆ ಓದಿರುವ ಗಂಡನ್ನು ವಿವಾಹಯೋಗ್ಯವೆಂದು ಪರಿಗಣಿಸಬೇಕಾದ ಅಗತ್ಯವಿದೆ. ಹಿಂದೆ, ಒಳ್ಳೆಯ ಕೆಲಸ ಹೊಂದಿರುವ ಗಂಡು ಸಿಗಬೇಕೆಂದು ಹೆಣ್ಣು  ಓದಿಸುತ್ತಿದ್ದರು. ಆದರೆ, ಈಗ ಗಂಡು ಮಕ್ಕಳು ಮದುವೆಯಾಗಬೇಕೆಂದರೆ  ಶಿಕ್ಷಣ ಹೊಂದುವುದು ಅನಿವಾರ್ಯವೆಂಬಂತಹ  ಪರಿಸ್ಥಿತಿ ನಿರ್ಮಾಣವಾಗಿದೆ.  ಆದ್ದರಿಂದ,ಹಳ್ಳಿಯಲ್ಲಿ ನೆಲೆನಿಲ್ಲಬಯಸುವ ಗಂಡುಮಕ್ಕಳೂ ಕೂಡ ಉನ್ನತ ಶಿಕ್ಷಣ ಪಡೆದು ಕೃಷಿ ಚಟುವಟಿಕೆಯಲ್ಲಿ ಮುಂದುವರಿಯಬಹುದು. ಕೇವಲ ಶಿಕ್ಷಣ ವಂಚಿತರು ಮಾತ್ರ ಕೃಷಿಕರು ಎನ್ನುವ ಮನೋಭಾವ ಬದಲಾಗಬೇಕಿದೆ. ಜೊತೆಗೆ, ಶಿಕ್ಷಣ ಪಡೆದ ಕೃಷಿಕರು ತಮ್ಮ ವೃತ್ತಿಯಲ್ಲಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಮರ್ಥರಾಗಿದ್ದು, ಮಧ್ಯವರ್ತಿಗಳಿಂದ ಮೋಸಹೋಗುವುದನ್ನು ತಪ್ಪಿಸಬಹುದು ಮತ್ತು ಆರ್ಥಿಕ ಸಂಕಷ್ಟಗಳಿಂದ ಬಚಾವಾಗಬಹುದು.  ಆದ್ದರಿಂದ, ಗಂಡುಮಕ್ಕಳು ತಮ್ಮ ವೃತ್ತಿ ಆಯ್ಕೆಗಳೇನೇ ಇದ್ದರೂ ಉನ್ನತ ಶಿಕ್ಷಣಕ್ಕೆ ಮರಳಿ ಬರುವುದು ಹೆಚ್ಚು ಸೂಕ್ತ.

ಇವುಗಳ ನಡುವೆ, ಇಂದು ಹಳ್ಳಿಯ ಗಂಡುಮಕ್ಕಳಿಗೆ ಹೆಣ್ಣು ಸಿಗದಿರಲು  ಕಾರಣವೆಂದರೆ, ಹೆಣ್ಣುಮಕ್ಕಳಲ್ಲಿ ಕೃಷಿಯ ಕುರಿತು ನಿರಾಸಕ್ತಿ ಮತ್ತು ಅವರಲ್ಲಿ ಗಂಡನ ಉದ್ಯೋಗ ಹೀಗೆಯೇ ಇರಬೇಕೆಂಬ ನಿರೀಕ್ಷೆ. ಕೃಷಿಕರೆಂದರೆ, ಸಿನಿಮಾ ಹೀರೋಗಳಂತೆ ಕಾಣದಿರಬಹುದು, ಆದರೆ, ಪ್ರೀತಿಗೇನೂ ಕಡಿಮೆ ಮಾಡಲಾರರು. ಈ ಹಳ್ಳಿಯ ಕೃಷಿಕರನ್ನು ಕೈಹಿಡಿದು ಯಶಸ್ಸಿನ ದಾರಿಯಲ್ಲಿ ಜೊತೆಯಾಗುವ ಕೆಲಸವನ್ನು ಪಟ್ಟಣದ ವಿದ್ಯಾವಂತ ಹೆಣ್ಣುಮಕ್ಕಳು ಮಾಡಬೇಕಾಗಿದೆ. ಮೂಲತಃ ಕೃಷಿ ಹೆಣ್ಣುಮಕ್ಕಳಿಂದ ಆರಂಭವಾದ ಚಟುವಟಿಕೆ. ಕಾಲಾನಂತರ, ಸಲಕರಣೆಗಳು ಮತ್ತು ಪ್ರಾಣಿಗಳನ್ನು ಪಳಗಿಸಿ ಕೃಷಿಗೆ ಉಪಯೋಗಿಸಲು ಆರಂಭಿಸಿದ ನಂತರ ಕೃಷಿಯ ಅಧಿಪತ್ಯ ಗಂಡಿನ ಪಾಲಾಯಿತು. ಇಂದಿಗೂ ಕೂಡ ಹೆಣ್ಣು ಮನಸ್ಸು ಮಾಡಿದರೆ, ಕೃಷಿಯಲ್ಲಿ ತನ್ನನ್ನು ತೊಡಗಿಸಿಕೊಂಡು ಸಾಕಷ್ಟು ಯಶಸ್ಸನ್ನು ಕಾಣಬಹುದು. ಇತ್ತೀಚಿಗೆ ಹೆಣ್ಣುಮಕ್ಕಳು ಕೃಷಿಯಲ್ಲಿ ತೊಡಗಿಸಿಕೊಳ್ಳುವುದು ಹೆಚ್ಚಾಗುತ್ತಿದೆ. ವಿಶೇಷವೆಂದರೆ, ನಾವು ಕಾಣುವಂತೆ ವಿದ್ಯಾವಂತ ಹೆಣ್ಣಿನ ಮೇಲ್ವಿಚಾರಣೆಯಲ್ಲಿರುವ ಕೃಷಿ ಚಟುವಟಿಕೆಯಲ್ಲಿ ನಷ್ಟ ಕಾಣುವುದು ಬಹಳ ಅಪರೂಪ. ಆದ್ದರಿಂದ ಹೆಣ್ಣುಮಕ್ಕಳು ಕೃಷಿಯಲ್ಲಿ ಹೆಚ್ಚು ತೊಡಗಿಸುವುದರಿಂದ  ಕೃಷಿಯೊಂದು ಲಾಭದಾಯಕ ಉದ್ಯಮವಾಗಬಹುದು, ಹಳ್ಳಿಗಳ ಜೀವನ ಮಟ್ಟ ಸುಧಾರಿಸಬಹುದು ಮತ್ತು ಹಳ್ಳಿಯ ಗಂಡು ಮಕ್ಕಳು ಹೆಣ್ಣು ಸಿಗುತ್ತಿಲ್ಲ ಎಂದು ಹಲುಬುವುದು ತಪ್ಪಬಹುದು. ಪ್ರಪಂಚದ ಉಳಿವು ಮತ್ತು ಅಳಿವು ಎರಡೂ ಹೆಣ್ಣಿನ ಕೈಯಲ್ಲಿದೆ ಎನ್ನುವುದಕ್ಕೆ ಇದು ಮತ್ತೊಂದು ನಿದರ್ಶನ. ಹಾಗೆಯೇ, ಹಳ್ಳಿಯ ಗಂಡುಮಕ್ಕಳು ಹೆಣ್ಣು  ಸಿಗುವುದಿಲ್ಲವೆಂದರೆ, ಹಳ್ಳಿಯ ಜೀವನದಲ್ಲಿ ಆಸಕ್ತಿಯಿರುವ  ಬೇರೆ ಜಾತಿಯ ಹೆಣ್ಣುಮಕ್ಕಳನ್ನು ಮದುವೆಯಾಗುವ ಮನಸ್ಸು ಮಾಡಬೇಕು. ಮದುವೆಗೆ ಸಮಾನ ಆಸಕ್ತಿ, ಪರಸ್ಪರ ಗೌರವ ಮತ್ತು ಪ್ರೀತಿ ಮುಖ್ಯವೇ ಹೊರತು ಜಾತಿಯಲ್ಲ.



**ಡಾ. ಜ್ಯೋತಿ**
**ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ,**
**ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು,**
**ತುಮಕೂರು**



# ಬಂಧಮುಕ್ತ

ಅದೊಂದು ದಿನ ಬೆಳಿಗ್ಗೆ ಮಹಾನಗರವೊಂದರ ಬಡಾವಣೆಯ ರಸ್ತೆಬದಿಯಲ್ಲಿ ಒಬ್ಬ ಬಡವನು ತನ್ನ ಹೊಟ್ಟೆಪಾಡಿಗೋಸ್ಕರ ಏನನ್ನೋ ಮಾರುತ್ತಿದ್ದ. ಅದೇ ರಸ್ತೆಯಾಗಿ ಶ್ರೀಮಂತ ಯುಟ್ಯೂಬರ್ ತನ್ನ ಸ್ನೇಹಿತನೊಡನೆ ಕಾರಿನಲ್ಲಿ ಬರುತ್ತಿದ್ದ. ಅವನು ಅನತಿ ದೂರದಿಂದ ರಸ್ತೆಬದಿಯ ಆ ಬಡವ್ಯಾಪಾರಿಯನ್ನು ಕಂಡು ಏನೋ ಹೊಳೆದು ತನ್ನ ಪಕ್ಕದಲ್ಲಿ ಕುಳಿತಿರುವ ಸ್ನೇಹಿತನಲ್ಲಿ ಹೇಳಿದ. ಅವರ ಕಾರು ಹೋಗಿ ಆ ಬಡವನ ಹತ್ತಿರ ನಿಂತಿತು. ಆ ಬಡವ ವ್ಯಾಪಾರದ ಆಸೆಯಿಂದ ಕಾರಿನ ಸನಿಹಕ್ಕೆ ಓಡೋಡಿ ಬಂದ. ಆತನ ಕೈಯಲ್ಲಿ ಪಂಜರವಿತ್ತು. ಅದರಲ್ಲಿ ಹಲವು ತಳಿಗಳ ಹತ್ತು ಗಿಳಿಗಳಿದ್ದವು. ಆಗ ಶ್ರೀಮಂತನ ಸ್ನೇಹಿತ ಕಾರಿನಿಂದಿಳಿದು ಮೊಬೈಲ್ ಕ್ಯಾಮರಾದಲ್ಲಿ ಚಿತ್ರೀಕರಿಸುತ್ತಿದ್ದಂತೆ ಶ್ರೀಮಂತನು ಗಿಳಿ ಮಾರುವವನಲ್ಲಿ ತಾನು ಅವನಲ್ಲಿರುವ ಎಲ್ಲ ಗಿಳಿಗಳನ್ನು ಖರೀದಿಸುವುದಾಗಿ ಹೇಳಿದ. ಅದರಂತೆ ಗಿಳಿವ್ಯಾಪಾರಿಯು ಒಂದೊಂದೇ ಗಿಳಿಯನ್ನು ಪಂಜರದಿಂದ ಹೊರತೆಗೆದು ಶ್ರೀಮಂತನ ಕೈಗೆ ನೀಡಿದ. ಶ್ರೀಮಂತನು ತನ್ನ ಕೈಗೆ ಬಂದ ಒಂದೊಂದೇ ಗಿಳಿಗಳನ್ನು ಮುಕ್ತವಾಗಿ ಹಾರಲು ಬಿಟ್ಟ. ಅದನ್ನು ಕಂಡು ಗಿಳಿಯ ವ್ಯಾಪಾರಿಗೆ ಆಶ್ಚರ್ಯವಾದರೂ ಮೌನವಾಗಿ ಎಲ್ಲ ಹತ್ತು ಗಿಳಿಗಳನ್ನು ಶ್ರೀಮಂತನ ಕೈಗೆ ನೀಡಿದ. ಅದನ್ನೆಲ್ಲಾ ಮುಕ್ತಗೊಳಿಸಿದ ನಂತರ ಶ್ರೀಮಂತನು ಗಿಳಿಯ ವ್ಯಾಪಾರಿಗೆ ಆತನು ಹೇಳಿದ ಬೆಲೆಯನ್ನು ಕೊಟ್ಟು “ನೋಡಯ್ಯಾ, ಪ್ರಾಣಿದಯಾಪರನಾದ ನಾನು ಈ ಮೂಕಪಕ್ಷಿಗಳ ವೇದನೆಯನ್ನು ನೋಡಲಾರೆ ಮತ್ತು ಅವುಗಳನ್ನು ಪಂಜರದಲ್ಲಿ ಬಂಧಿಸಿ ಹಿಂಸಿಸುವುದನ್ನು ನಾನೆಂದೂ ಸಹಿಸಲಾರೆ. ಅದಕ್ಕೆಂದೇ ನಿನ್ನಲ್ಲಿರುವ ಈ ಎಲ್ಲ ಪಕ್ಷಿಗಳನ್ನು ಖರೀದಿಸಿ ನಿನ್ನಿಂದ ಬಂಧಮುಕ್ತಗೊಳಿಸಿದ್ದೇನೆ” ಎಂದ. ಆದರೆ ತನಗೆ ದುಡ್ಡು ಬಂದ ಸಂತೋಷದಲ್ಲಿ ಆ ಬಡವ ಏನೂ ಪ್ರತಿಕ್ರಿಯೆ ನೀಡದೆ ಅಲ್ಲಿಂದ ತನ್ನ ಮನೆಯ ಕಡೆಗೆ ಹೆಜ್ಜೆಯಿಟ್ಟ.

ಇತ್ತ ಶ್ರೀಮಂತ ಯುಟ್ಯೂಬರ್ “ನಾನು ಇಂದು ರಸ್ತೆಬದಿಯ ವ್ಯಾಪಾರಿಯೊಬ್ಬನ ಪಂಜರದಲ್ಲಿ ಗಿಳಿಗಳನ್ನು ಕಂಡೆ. ಸ್ವತಂತ್ರವಾಗಿ ಹಾರಾಡಬೇಕಿದ್ದ ಅಂದದ ಗಿಳಿಗಳು ಪಂಜರದಲ್ಲಿ ಬಂಧಿಯಾಗಿ ವಿಲವಿಲನೆ ಒದ್ದಾಡುವುದನ್ನು ನೋಡಿ ನನಗೆ ಮರುಕವಾಯಿತು. ಹಾಗಾಗಿ ನಾನು ಗಿಳಿವ್ಯಾಪಾರಿಗೆ ಅವನು ಹೇಳಿದ ದುಡ್ಡುಕೊಟ್ಟು ಅವುಗಳನ್ನೆಲ್ಲ ಖರೀದಿಸಿ ಅಲ್ಲೇ ಬಂಧಮುಕ್ತಗೊಳಿಸಿದೆ” ಎಂದು ಬರಹವನ್ನು ಬರೆದು ಆ ವಿಡಿಯೋವನ್ನು ತನ್ನ ಯುಟ್ಯೂಬ್, ವಾಟ್ಸಾಪ್, ಲಿಂಕಿಡ್ ಇನ್, ಟ್ವಿಟರ್, ಫೇಸ್ ಬುಕ್, ಇನ್ಸ್ಟಾಗ್ರಾಮ್  ಹೀಗೆ ಎಲ್ಲ ಕಡೆ ಅಪ್ಲೋಡ್ ಮಾಡಿ ಜನರ ಪ್ರತಿಕ್ರಿಯೆಗಳಿಗೆ ಕಾತರಿಸಿದ. ಅವನ ನಿರೀಕ್ಷೆಯಂತೆ ಸಂಜೆಯಾಗುವಾಗ ಅವನ ವಿಡಿಯೋ ಎಲ್ಲ ಕಡೆಗಳಲ್ಲಿ ವೈರಲ್ ಆಗಿತ್ತು. ಮೂಕಪಕ್ಷಿಗಳನ್ನು ಪಂಜರದಿಂದ ಬಿಡುಗಡೆ ಮಾಡಿ ಸ್ವಚ್ಛಂದವಾಗಿ ಹಾರುವಂತೆ ಮಾಡಿದ ಅವನ ಹೃಯವಂತಿಕೆಯನ್ನು ಕೊಂಡಾಡಿ ಎಲ್ಲರಿಂದ ಮೆಚ್ಚುಗೆಗಳ ಮಹಾಪೂರವೇ ಹರಿದಿತ್ತು. ಅದನ್ನು ಕಂಡು ಅತ್ಯಾನಂದಗೊಂಡ ಆ ಯುಟ್ಯೂಬರ್.

ಇತ್ತ ಅನಿರೀಕ್ಷಿತವಾಗಿ ತನ್ನೆಲ್ಲ ಗಿಳಿಗಳನ್ನು ತಾನು ಹೇಳಿದಷ್ಟು ಹಣವನ್ನು ಕೊಟ್ಟು ಒಬ್ಬನೇ ಗಿರಾಕಿ ಕೊಂಡಿದ್ದರಿಂದ ಅತ್ಯಂತ ಸಂತೋಷಗೊಂಡ ಆ ಬಡ ಗಿಳಿವ್ಯಾಪಾರಿ ತನ್ನ ಮನೆಯವರ ಹೊಟ್ಟೆಹೊರೆಯಲು ಬೇಕಾದ ಆಹಾರಪದಾರ್ಥ ಹಾಗೂ ಒಂದಷ್ಟು ಧಾನ್ಯಗಳನ್ನು ಖರೀದಿಸಿ ತನ್ನ ಗುಡಿಸಲನ್ನು ಸೇರಿದ. ಹಾಗೆಯೇ ತನ್ನ ಕೈಯಲ್ಲಿದ್ದ ಪಂಜರವನ್ನು ಮನೆಯ ಹೊರಗೆ ನೇತಾಡಿಸಿ ಅದರೊಳಗೆ ತಾನು ತಂದ ಧಾನ್ಯಗಳನ್ನು ಚೆಲ್ಲಿದ. ಅವನ ನಿರೀಕ್ಷೆಯಂತೆ ಸಂಜೆಯಷ್ಟೊತ್ತಿಗೆ ಅವನ ಆ ಎಲ್ಲ ಹತ್ತು ಗಿಳಿಗಳು ಹಾರಿಕೊಂಡು ಬಂದು ಅದೇ ಪಂಜರವನ್ನು ಸೇರಿ ಅವನು ಹಾಕಿದ್ದ ಧಾನ್ಯವನ್ನು ಸಂತಸದಿಂದ ಮೆಲ್ಲುತ್ತಿದ್ದವು. ಅದನ್ನು ನೋಡುತ್ತಾ ಅತ್ಯಾನಂದಗೊಂಡ ಬಡವ ಪಂಜರವನ್ನು ಮುಚ್ಚಿ ನಾಳೆಯೂ ಇಂದಿನಂತೆಯೇ ಆಗಲಿ ದೇವರೇ!, ಎಂದು ತನ್ನ ದೈವಕ್ಕೆ ಕೈಮುಗಿದ.



**ರಮೇಶ್ ಶೆಟ್ಟಿಗಾರ್ ಮಂಜೇಶ್ವರ**
**ಸುಂದರರಾಮ ಶೆಟ್ಟಿ ನಗರ,**
**ಬೆಂಗಳೂರು**



## ಸಂಪಾದಕ ವಾಣಿ

# **ನಾರಾಯಣ** ಶೆಟ್ಟಿಗಾರ್

ನಮ್ಮ ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಮತ್ತು ಉದಯೋನ್ಮುಖ ಬರಹಗಾರರಿಗೆ ಉತ್ತೇಜನ ನೀಡುವ ಉದ್ದೇಶ ಹೊಂದಿರುವ ಶೆಟ್ಟಿಗಾರ ವಾಣಿ ತನ್ನ ಕಾರ್ಯಕ್ಷೇತ್ರದಲ್ಲಿ ಪ್ರಗತಿ ಪಥದಲ್ಲಿದ್ದು, ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿ, ತನ್ನ ಪಾತ್ರ ನಿರ್ವಹಣೆಯಲ್ಲಿ ಸಾರ್ಥಕತೆ ಸಾಧಿಸುತ್ತಿದೆ. ಅನೇಕ ಹೊಸ ಬರಹಗಾರರು ಉತ್ಸುಕತೆಯಿಂದ ಭಾಗವಹಿಸುತ್ತಿದ್ದಾರೆ. ಜೊತೆಯಲ್ಲಿ ಹಿರಿಯ ಅನುಭವಿ ಬರಹಗಾರರೂ ನಮ್ಮೊಂದಿಗೆ ಭಾಗಿಗಳಾಗುತ್ತಿದ್ದಾರೆ. ತಿಂಗಳ ಮೊದಲ ವಾರದಲ್ಲಿಯೇ ಮುಂದಿನ ತಿಂಗಳ ಸಂಚಿಕೆಯ ಲೇಖನಗಳ ಆಯ್ಕೆಯನ್ನು ಪೂರ್ಣಗೊಳಿಸಿ, ಸಂಚಿಕೆಯ ವಿನ್ಯಾಸ ಮತ್ತಿತರ ಸಿದ್ಧತೆಗಳ ಕಡೆಗೆ ಗಮನ ಹರಿಸುವುದು ಸಾಧ್ಯವಾಗುತ್ತಿದೆ ಎನ್ನುವುದು ನಿಜವಾಗಿ ನಮಗೆ ಹೆಮ್ಮೆ ತರುವ ವಿಷಯ. ನಮ್ಮ ಈ ಲೇಖನ ಯಜ್ಞದಲ್ಲಿ ಭಾಗಿಗಳಾಗಿ ಸಹಕಾರ ನೀಡುತ್ತಿರುವ ನಮ್ಮ ಲೇಖಕ ಬಂಧುಗಳೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು. ಬರಹಗಾರರಷ್ಟೇ ಪ್ರಾಧಾನ್ಯತೆ ಹೊಂದಿರುವ ಓದುಗ ಬಂಧು ಮಿತ್ರರಿಗೂ ನಮ್ಮ ಅಭಿವಂದನೆಗಳು. ವಾಚಕರವಾಣಿಯಲ್ಲಿ ನಿಮ್ಮ ಅನಿಸಿಕೆ, ಪ್ರೋತ್ಸಾಹದ ನುಡಿಗಳು ಬಂದರೆ ನಮಗದು ಇನ್ನೂ ಪ್ರೋತ್ಸಾಹದಾಯಕ. ನಮ್ಮ ಸಮಾಜದ ಎಲ್ಲಾ ಬಂಧುಗಳು ನಮ್ಮ ಈ ಕಾರ್ಯಕ್ರಮದಲ್ಲಿ ತುಂಬು ಹೃದಯದಿಂದ ಭಾಗವಹಿಸಿ, ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಿ, ಪತ್ರಿಕೆ ಇನ್ನೂ ಪ್ರಗತಿ ಸಾಧಿಸುವಂತೆ ಮಾಡುವಿರೆಂಬ ವಿಶ್ವಾಸ ನಮ್ಮದು.

**ನವರಾತ್ರಿ**

**ನವರಾತ್ರಿ** ಎಂದರೆ ಒಂಬತ್ತು ರಾತ್ರಿಗಳು. ದೇವಿಯ ಒಂಬತ್ತು ವಿಧದ ರೂಪಗಳನ್ನು ನವರಾತ್ರಿ ಕಾಲದಲ್ಲಿ ಆರಾಧಿಸಲಾಗುತ್ತದೆ. ಹತ್ತನೆಯ ದಿನ ವಿಜಯದಶಮಿ. ನವರಾತ್ರಿ ಹಬ್ಬವು ಆಶ್ವಯುಜ ಶುದ್ಧ ಪಾಡ್ಯದ ದಿನ ಪ್ರಾರಂಭವಾಗುತ್ತದೆ.

ನವರಾತ್ರಿಯ ಕುರಿತು ಪುರಾಣಗಳಲ್ಲಿ ಹಲವು ಉಲ್ಲೇಖಗಳಿವೆ. ನವರಾತ್ರಿಯಲ್ಲಿ ದುರ್ಗಾದೇವಿಯು ಮಹಿಷಾಸುರ ಮರ್ದಿನಿಯಾಗಿ ಮಹಿಷಾಸುರ ಎಂಬ ರಾಕ್ಷಸನನ್ನು ಸಂಹಾರ ಮಾಡಿದಳು. ಹತ್ತನೆಯ ದಿನ ದುರ್ಗೆಯು ಮಹಿಷಾಸುರನನ್ನು ಸಂಹರಿಸಿ ವಿಜಯವನ್ನು ಸಾಧಿಸಿದ ದಿನ. ಆ ದಿನವನ್ನು ವಿಜಯದಶಮಿ ಎಂದು ಕರೆಯಲಾಗುತ್ತದೆ. ತ್ರೇತಾಯುಗದಲ್ಲಿ ಶ್ರೀರಾಮನು ರಾವಣನನ್ನು ಸಂಹಾರ ಮಾಡಿದ ದಿನ ವಿಜಯದಶಮಿ ಎಂಬ ನಂಬಿಕೆ ಇದೆ. ಪಾಂಡವರು ಅಜ್ಞಾತವಾಸ ಮಾಡುವಾಗ ತಮ್ಮ ಆಯುಧಗಳನ್ನು ಬನ್ನಿಮರದಲ್ಲಿ ಅಡಗಿಸಿ ಇಟ್ಟಿದ್ದರು. ದಶಮಿಯ ದಿನಕ್ಕೆ ಅಜ್ಞಾತವಾಸ ಮುಗಿದು ಅವರು ಬನ್ನಿ ಮರದಿಂದ ತಮ್ಮ ಆಯುಧಗಳನ್ನು ಹಿಂದಕ್ಕೆ ಪಡೆದು ಕುರುಕ್ಷೇತ್ರ ಯುದ್ಧದಲ್ಲಿ ಕೌರವರನ್ನು ಸೋಲಿಸಿ ವಿಜಯ ಸಾಧಿಸಿದರು ಎಂದು ಹೇಳುತ್ತಾರೆ.

### ***ನವರಾತ್ರಿಯ ನವದುರ್ಗೆಯರು***

*ಪ್ರಥಮಂ ಶೈಲಪುತ್ರೀತಿ ದ್ವಿತೀಯಂ ಬ್ರಹ್ಮಚಾರಿಣೀ | ತೃತೀಯಂ ಚಂದ್ರಘಂಟೇತಿ ಕೂಷ್ಮಾಂಡೇತಿ ಚತುರ್ಥಕಮ್ ||*
*ಪಂಚಮಂ ಸ್ಕಂದಮಾತೇತಿ ಷಷ್ಠಂ ಕಾತ್ಯಾಯನೀ ತಥಾ | ಸಪ್ತಮಂ ಕಾಲರಾತ್ರಿಶ್ಚ ಮಹಾಗೌರೀತಿ ಚಾಷ್ಟಮಮ್ ||*
*ನವಮಂ ಸಿದ್ಧಿದಾತ್ರೀ ಚ ನವದುರ್ಗಾಃ ಪ್ರಕೀರ್ತಿತಾಃ | ಉಕ್ತಾನ್ಯೇತಾನಿ ನಾಮಾನಿ ಬ್ರಹ್ಮಣೈವ ಮಹಾತ್ಮನಾ ||*

ಹಿಂದೂ ಧರ್ಮದಲ್ಲಿ ದುರ್ಗಾ ದೇವಿಯ ಒಂಬತ್ತು ಅಭಿವ್ಯಕ್ತಿಗಳು. ವಿಶೇಷವಾಗಿ ನವರಾತ್ರಿ ಹಬ್ಬದ ಸಮಯದಲ್ಲಿ ಪೂಜಿಸಲ್ಪಡುವ ಒಂಬತ್ತು ರೂಪಗಳು. ಒಂಬತ್ತು ರಾತ್ರಿಯೂ ಕ್ರಮವಾಗಿ ಒಂಬತ್ತು ರೂಪಗಳನ್ನು ಪೂಜಿಸಲಾಗುತ್ತದೆ.

ದುರ್ಗಾ ದೇವಿಯ ಒಂಬತ್ತು ರೂಪಗಳು: ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟಾ, ಕುಷ್ಮಾಂಡಾ, ಸ್ಕಂದಮಾತಾ, ಕಾಳರಾತ್ರಿ, ಕಾತ್ಯಾಯನಿ, ಮಹಾಗೌರಿ ಮತ್ತು ಸಿದ್ಧಿದಾತ್ರಿ.

**ಎಲ್ಲರಿಗೂ ನವರಾತ್ರಿಯ ಶುಭಾಶಯಗಳು.**

# ಬದುಕಿನ ಬವಣೆ

ಬಡತನ  ಬದುಕಾ ನುಂಗಿತ್ತಾ
ನೋಡವ್ವ ತಂಗಿ...
ಬಡತನ ಬದುಕಾ ನುಂಗಿತ್ತಾ ॥ ಬ ॥

ಗುರುಗಳು ವಿದ್ಯೆ ತುಂಬಿ
ಪಾಲಕರು ಬುದ್ಧಿ ತುಂಬಿ
ವಿದ್ಯೆ ಬುದ್ಧಿ ಸೇರಿ ಮಕ್ಕಳ ಭವಿಷ್ಯ ತುಂಬಿತ್ತಾ
ನೋಡವ್ವ ತಂಗಿ ಮಕ್ಕಳ  ಭವಿಷ್ಯ ತುಂಬಿತ್ತಾ ॥ ಬ ॥

ಎತ್ತು ಹೊಲವ ಉತ್ತಿ
ರೈತನು ಬೀಜ ಬಿತ್ತಿ
ಎತ್ತು ರೈತ ಸೇರಿ ಹೊಲದಲ್ಲಿ ಫಸಲು ತುಂಬಿತ್ತಾ
ನೋಡವ್ವ ತಂಗಿ.. ಹೊಲದಲ್ಲಿ ಫಸಲು ತುಂಬಿತ್ತಾ ॥ ಬ ॥

ನದಿಯಲ್ಲಿ ಮೀನು ತುಂಬಿ
ಬೆಸ್ತನ ಬಲೆಗೆ ಬಿದ್ದು
ಬೆಸ್ತನ ಹೊಟ್ಟೆ ತುಂಬಿತ್ತಾ
ನೋಡವ್ವ ತಂಗಿ ಬೆಸ್ತನ ಹೊಟ್ಟೆ ತುಂಬಿತ್ತಾ ॥ ಬ ॥

ಜೋರಾಗಿ ಮಳೆ ಸುರಿದು
ಸುತ್ತೆಲ್ಲಾ ನೀರು ಹರಿದು
ಜಲ ಪ್ರವಾಹ ಬಂದಿತ್ತಾ
ನೋಡವ್ವ ತಂಗಿ ಪ್ರವಾಹ ಬದುಕಾ ನುಂಗಿತ್ತಾ ॥ ಬ॥



**ಕಮಲಾಕ್ಷಿ ಶೆಟ್ಟಿಗಾರ್**
**ರಾಮಗೊಂಡನಹಳ್ಳಿ**

AI generated image. No photo credits required



# ಆಹಾ! ಬ್ರಹ್ಮನೆಂಬ ಜಾದೂಗಾರ

ಹಾಸಿ ಚಪ್ಪರ ಬೀಸಿ ಚಾಮರ
ಹೊಳೆವ ದೇವರ ಮಂದಿರ |
ಸೂಸಿ ಹಾಸವ ಕೂಸಿಗಾಸರೆ
ಕೊಡುವ ಸುಂದರ ಪರಿಸರ || ಪ ||

ಜಾದುಗಾರನೆ ಇಳೆಗೆ ಇಳಿಯುತ
ಸೃಷ್ಟಿ ಮಾಡಿದ ಸ್ವರ್ಗವೇ |
ವಾದ್ಯ ವೃಂದದ ಮಧುರ ನಾದಕೆ
ಸಲಿಲ ಧಾರೆಯ ನೃತ್ಯವೇ ||

ಹಿಮದ ಉಡುಗೆಯ ಧರಿಸಿ ಮೆರೆಯುವ
ನಡುಕವಿಲ್ಲದ ಗಿರಿಗಳೇ |
ಸುಮಕೆ ತೊಟ್ಟಿಲು ಕಟ್ಟಿ ತೂಗುವ
ತರುವು ಲತೆಗಳ ಬನಗಳೇ ||

ಬಣ್ಣದುಡುಗೆಯ ಹೊಲಿದು ಕೊಟ್ಟಿಹ
ದರ್ಜಿ ಯಾರೊ ಚಿಟ್ಟೆಗೆ |
ಹಣ್ಣು ಸವಿಯುತಲೆಂಥ ಗಾಯನ
ಗುರುಗಳಾರೊ ಪಕ್ಷಿಗೆ ||

ಎತ್ತ ಹೋಗದೆ ನಿಂದು ನಗುತಿಹ
ನಮ್ಮ ನಡುವೆಯೆ ಬ್ರಹ್ಮನು |
ಇತ್ತ ಕಾಣಿಕೆ ಉಳಿಸಿಕೊಂಡರೆ
ನೆಮ್ಮದಿಯಲೇ ಮನುಜನು ||



**ಶೋಭಾ ಹರಿಪ್ರಸಾದ ಶೆಟ್ಟಿಗಾರ್**
**ಉಡುಪಿ**





# ಡಬ್ಬಲ್ ಬೀನ್ಸ್ ಬಾಲ್ಕನಿಯಲ್ಲಿ ಬೆಳೆಯುವ ವಿಧಾನ



1 ದಿನಸಿ ಅಂಗಡಿಯಿಂದ ಕೊಂಡು ತಂದ ಡಬ್ಬಲ್ ಬೀನ್ಸ್



2 ನಾಲ್ಕು ಬೀಜವನ್ನು ನೆನೆಹಾಕಿ ಮೊಳಕೆ ಬರಿಸಿ



3

ಮೊಳಕೆ ಬೀಜವನ್ನು ಒಂದು ಇಂಚು ಆಳಕ್ಕೆ ಬಿತ್ತಿ ಅದರ ಮೇಲೆ ಒಂದು ಪದರ ಪಾಟಿಂಗ್ ಮಿಕ್ಸ್ ಹಾಕಿ ಅದರ ಮೇಲೆ ಒಂದು ಪದರ ತೆಂಗಿನ ಕಾಯಿಯ ಜುಟ್ಟನ್ನು ಹರಡಿ. ತೇವಾಂಶ ಇರುವ ಹಾಗೆ ನೋಡಿಕೊಳ್ಳಿ. ಸೂರ್ಯ ರಶ್ಮಿ ಬೀಳುವ ಹಾಗೆ ಇಡಿ




4

ಪಾಟ್ ನಲ್ಲಿ ಬೆಳೆದ ಸಸಿ ದೊಡ್ಡ ಪಾಟ್ ಗೆ ರಿಪಾಟ್ ಮಾಡಿ



5

ಡಬ್ಬಲ್ ಬೀನ್ಸ್ ಬೆಳೆದು ದೊಡ್ಡದಾಗಿರುವ ಗಿಡ



**ನಾಗಪ್ಪ ನಟರಾಜ,**
**ರಿಟೈರ್ಡ್ ಎಕ್ಸಿಕ್ಯುಟಿವ್ ಎಂಜಿನಿಯರ್**
**ಬಸವನಗುಡಿ, ಬೆಂಗಳೂರು**

Image courtesy of the author



# ಮುಂಜಾವಿನ ತುಹಿನಾದ್ರಿ

ಪ್ರಕೃತಿಮಾತೆಯೇ ಮೈಹಾಸಿ ಮಲಗಿರುವಳಲ್ಲಿ;
ಸೂರ್ಯನುದಯಕೆ ಮೊದಲ ಜಾಮದ ಅಡ್ಡ ನೆರಳಲ್ಲಿ!

ದಟ್ಟ ಮೋಡದ ಅಟ್ಟ ಸಟ್ಟೇವಿಸೇ;
ಮಾರ್ಪಾಡಿದೆ ಅಲ್ಲಿ ಮೇಲ್ಹಾವಣಿಯು!

ಹೊಳೆ ಝರಿಯ, ನೆರಿಗೆ ನೀರು ಇಳೆ ಚುಂಬಿಸಿ,
ಸ್ವಚ್ಛಂದ ಸೆರೆಯಲಿ, ಮೃದು ಪಿಸುಮಾತು ಮಾರ್ದನಿಸಿ...

ಸುಳಿ ಉರುಳುರುಳಾಗಿ ಧರೆಯೊಳು;
ತವಕದಲಿ ಹಾತೊರೆಯುತಿರುವುದಲ್ಲಿ -ಸೇವಾರ್ಥ ಶುದ್ದಿಯಲಿ!

ರವಿ ಇನಿಯನ ಮೊದಲುದಯಕೆ ಸರಿಯಾಗಿ -
ಕಾಯೇನ-ವಾಚಾ-ಮನಸಾ ಪರಿಶುದ್ಧತೆಯಲಿ;
ನೆರೆ ನಿಂತವಳಾಗಿ ಕಂಗೊಳಿಸುವಳಲ್ಲಿ -  ಪ್ರಕೃತಿ ಮಾತೆ!

ರವಿಕಿರಣದ ತೀಕ್ಷ್ಣ ಇಣುಕು ಕಚಗುಳಿ ಇಟ್ಟಂತಾಗಿ;
ರತಿ-ರಸ ಕ್ರೀಡೆಯ ಮಧುರ ಕ್ಷಣಕೆ ಸಾಕ್ಷ್ಯಾಭ್ಯಂತರ ದಂಡಿನ ತೆರದಿ;

ಮಾರ್ಪುಗೊಳುವುದು ಮೋಡಗಳು -
ಕ್ಷಣಾರ್ಧದಲಿ ಕರಗಿ ನಿರ್ಗಮಿಸುವವಲ್ಲಿ;
ಸಂದ ಕರ್ತವ್ಯದ ಪರಿಪೂರ್ಣತೆಯ ಸಾರ್ಥಕತೆಗೆ ಸಾಕ್ಷಿಯಾಗಿ!

ಭುವಿ ಭಾಸ್ಕರನ ಸ್ವಾಗತೋತ್ಸವ ನಿತ್ಯನಿರಂತರ;
ಕವಿ ಚಿನ್ಮೂರ್ತ ಮನಃಸ್ಮೃತಿಯಾಗಿ....



**ಎಕ್ಕಾರ್ ಡಿ. ಪಿ. ಶೆಟ್ಟಿಗಾರ್,**
**ಶೇಷಾದ್ರಿಪುರ, ಬೆಂಗಳೂರು**

# ನೇಕಾರ ನಾನಾಗಬೇಕು

ಜಗದ ಜಂಜಾಟಗಳ ಮನ ಕವಿದ ಕ್ಲೇಶಗಳ
ದುಗುಡ ದುಮ್ಮಾನಗಳ ಹಲವು ಸುಮ್ಮಾನಗಳ
ನೂಲುಗಳ ಹಾಸಿನಲಿ ನನದೊಂದು ಮಹದಾಸೆ
ನೇಕಾರ ನಾನಾಗಬೇಕು

ಬರದ ನಾಡಿನ ನಡುವೆ ಬರಿದಾದ ಬೀಡಿನಲಿ
ಬರಸಿಡಿಲ ಮಳೆಯಾಗಿ ಮೊರೆಮೊರೆವ ತೊರೆಯಾಗಿ
ನಳನಳಿಸುತಿರುವಿಳೆಗೆ ಹಸಿರು ಸೀರೆಯನುಡಿಸೆ
ನೇಕಾರ ನಾನಾಗಬೇಕು

ಅತಿಯಾಸೆ ನನಗಿಲ್ಲ ಮಿತಿಯಲ್ಲೆ ಹಿತವಿಹುದು
ರಾಜಕೀಯದ ಗಾಳಿ ಬೀಸದದು ನನ್ನೆಡೆಗೆ
ಪರಹಿತದ ಹಾಸಿನಲಿ ಹೊಸಸೀರೆ ಹೊಸೆವಂಥ
ನೇಕಾರ ನಾನಾಗಬೇಕು

ಮಗ್ಗಗಳು ಮರೆಯಾಗಿ ಅಗ್ಗಳದ ಹೊರೆಯಾಗಿ
ಅರಿವೆಗಳ ಅರಿವುಗಳು ಹರಿದ ನೆನಪುಗಳಾಗಿ
ಸರಿದು ಹೋಗುವ ಮುನ್ನ ಮೈಕೊಡವಿ ಮತಿವಂತ
ನೇಕಾರ ನಾನಾಗಬೇಕು



**ನಾರಾಯಣ ಶೆಟ್ಟಿಗಾರ್,**
**ವಿಶ್ವಪ್ರಿಯನಗರ,**
**ಬೆಂಗಳೂರು**

AI generated image: No photo credits required



# ಅಮ್ಮ ಮತ್ತು ಅವಳು

Image courtesy of the author

ಅಮ್ಮನ ಒಲುಮೆ
ಎಷ್ಟು ಬರೆದರೂ
ಅಷ್ಟೂ ಕಡಿಮೆ.
ಹೊಡೆದರೂ, ಬಡಿದರೂ
ಅಲ್ಲೊಂದು ಪ್ರೀತಿ ಇತ್ತು.
ಕಚಗುಳಿ ಇಟ್ಟು
ನಗಿಸುವುದವಳಿಗೂ ಗೊತ್ತು.

ಹೊತ್ತು ಹೊತ್ತಿಗೆ
ತುತ್ತು ಮುತ್ತುಗಳ ಹರಡಿ
ತೊಟ್ಟಿಲ ತೂಗಿ
ನಿದ್ದೆಗೆ ಹೊರಳಿಸುವಳು
ಜೋಗುಳವ ಹಾಡಿ.

ಮಡದಿ ಬಂದಳು
ನಲಿಯುತ ಎದೆಗೊರಗಿ
ಅಮ್ಮ ಕುಳಿತಳು
ಹಿತವಾಗಿ ಗೋಡೆಗೊರಗಿ

ಗೆಜ್ಜೆಯ ಸದ್ದು ಮನೆಯೊಳಗೆ
ಅವಳು ಬಂದ ಘಳಿಗೆ.
ನೆನಪಿಸಿ ನೀಡುವಳು
ಅಗಾಗ ಅಮ್ಮನಿಗೆ ಗುಳಿಗೆ.

ಹಠದಲ್ಲಿ ಬಾಲೆ
ಸಿಟ್ಟಾದರೆ ಶಿಲೆ.
ಒಮ್ಮೊಮ್ಮೆ ಅವಳ ಅಲೆ
ಉರಿಸುವುದೇ ಇಲ್ಲ ಒಲೆ.

ಅಮ್ಮನಂತೆಯೆ ಅವಳು
ಮನೆಯ ಮಗಳು
ಹೊಳೆಯುವ ಬೆಳದಿಂಗಳು
ಸದಾ ಬೇಯುವ ಅನ್ನದಗಳು.



**ಜಗದೀಶರಾಂ ಶೆಟ್ಟಿಗಾರ್,**
**ಜಪ್ತಿ, ಕುಂದಾಪುರ**

AI generated image: No photo credits required

# ಮಳೆಗಾಲ

ಆಗಸದಿಂದ ಇಳಿದ ಜಲಪಾತ
ಬೆರಗಾಗಿ ಕುಣಿಯುವ ಈ ಧರೆ
ಮೋಡ ಕರಗಿ ನೀರಾಗಿ ಮಳೆ ಸುರಿದು ತಂಪಾಯ್ತು ವಸುಂಧರೆ

ಹಳ್ಳಕೊಳ್ಳಗಳು ತುಂಬಿ
ಬಳುಕುತ್ತಾ ಸಾಗಿ ಕಣ್ಣಿಗೆ ತಂಪ ಬೀರಿ
ಪಾತಾಳ ಸೇರಿದ್ದ ಬಾವಿಯ ನೀರು
ಮೇಲ್ಬಂದು ತನ್ನ ಅಸ್ತಿತ್ವವ ಸಾರಿ

ಕಣ್ಮನ ಸೆಳೆಯುವ ಮಳೆಬಿಲ್ಲು
ಆಗಸದಲ್ಲಿ ಮೂಡಿಸಿತು ಚಿತ್ತಾರ
ನೀಲಾಕಾಶ ಮೋಡದ ನಡುವೆ
ಸಪ್ತ ವರ್ಣದ ಅಂದದ ಹಾರ

ಬಾನಿನಿಂದ ಇಳಿದು ಬರುವ
ಆಲಿಕಲ್ಲುಗಳೆಂಬ ಬಿಳಿಯ ಮುತ್ತು
ಹೆಚ್ಚಿಸಿತು ಮಳೆಗಾಲದ ಚೆಲುವ
ಮಳೆ ಹನಿಗಳಿಂದ ಬೆರೆತು

ಕಾಲಕ್ಕೆ ಸರಿಯಾಗಿ ಬರುವ ಮಳೆ
ರೈತನ ಮೊಗದಿ ನಗುವ ತುಂಬಿತು
ಬೆಳೆ ಬೆಳೆಯಲು ನೀರೆರಚಿತು
ನೆಲತಾಯಿಗೆ ಹಸಿರು ಹೊದಿಕೆ ಹೊದಿಸಿತು

ಮಳೆ ಹನಿಗಳ ನಿನಾದ
ತೇವವಾದ ಬುವಿಯ ಕಂಪು
ಪ್ರಕೃತಿ ಪ್ರಿಯ ಕಾಯ್ವ ಈ ಸಮಯ
ಮೂಡಿಸುವ ಭಾವ ಹೊಮ್ಮಿಸುವ ಕವಿತೆಯ

ನೀರ ಚಕ್ರ ನಿರಂತರ
ಪರಿಸರ ವ್ಯವಸ್ಥೆಯ ಸಮತೋಲನ
ಜೀವವೈವಿಧ್ಯಗಳ ಪೋಷಣೆ
ಪ್ರಕೃತಿಯ ಪುನರ್ಜೀವನ

ಮಳೆಯಿಂದ ತೋಯ್ದ
ಗಿಡಮರಗಳ ಸೊಬಗ
ಹಚ್ಚಹಸುರಿನ ತರುಲತೆಗಳ ಮೆರಗ
ಸ್ವಚ್ಛ ಬಾನಂಗಳದ ಸೊಗಸ
ಮಿಂದೆದ್ದ ಬುವಿಯ ನೋಡಲೆಷ್ಟು ಸೋಜಿಗ!



**ಸ್ವರ್ಣ ಮಹೇಶ್**
**ಸಾಲಿಕೇರಿ**

AI generated image: No photo credits required



ಭಾಗ ೨

# ...ಐ ಯಾಮ್ ಎಕ್ಸ್‌ಪೆಕ್ಟಿಂಗ್

***(ರಾಗಿಣಿ I am expecting ಎಂದಿದ್ದಳು. ಮುಂದಿನ ರಾಮಾಯಣ ಓದಿ.)***

ಇವರಿಬ್ಬರ ಅಳುವನ್ನು ನೋಡಿ ಮನಸ್ಸಿನಲ್ಲೆ ಸುದೀಪನು "ರಾಗಿಣಿ ಮನೇಲಿ ಪಾರ್ಟಿ ಬಗ್ಗೆ ಹೇಳಿರಲಿಲ್ಲ ಅನ್ಸುತ್ತೆ. ಇವತ್ತು ಹೇಳಿರ್ಬೇಕು. ಅದ್ಕೆ ಹೀಗೆ ಆಡ್ತಿದ್ದಾರೆ. ಇವಳನ್ನ ಚಿಕ್ಕಂದಿನಿಂದ ಫ್ರೆಂಡ್ಸ್ ಮನೆಗೆ ಕಳ್ಸೆ ಇಲ್ಲಾ ಅನ್ಸುತ್ತೆ. ಆದ್ರು ರಾಗಿಣಿ ಮನೆಯಲ್ಲಿ ಅಪ್ಪ ಅಮ್ಮ ಇಷ್ಟೊಂದು ಸೆನ್ಸಿಟಿವ್ ಅಂತ ಹೇಳೆ ಇಲ್ವಲ್ಲಾ?" ಅಂದುಕೊಳ್ಳುತ್ತಾನೆ.

ಸುದೀಪ: ಅಂಕಲ್. ಪರ್ವಾಗಿಲ್ಲ ಸಮಾಧಾನ ಮಾಡ್ಕೋಳಕ್ಕೆ ಹೇಳಿ. ಈಗೇನು ಹಾಳಾಗಿಲ್ಲ.

ಕೃಷ್ಣಪ್ಪ: ಏನೋ ಸಮಾಧಾನ ಮಾಡೋದು? ಇದಕ್ಕೆಲ್ಲಾ ನೀನೆ ಕಾರಣ. ನಿನ್ನ ಅಪ್ಪ ಅಮ್ಮನಿಗೆ ಕಾಲ್ ಮಾಡು. ಈಗಲೆ ಇಲ್ಲಿಗೆ ಬರಲಿಕ್ಕೆ ಹೇಳು.

ಸುದೀಪ: (ಇವರೇನ್ ಗುರು, ಇಷ್ಟಕ್ಕೆಲ್ಲ ಅಪ್ಪ ಅಮ್ಮನ ಕರ್ಸು ಅಂತಿದ್ದಾರೆ. ಏನ್ ಸ್ಕೂಲ್ ಕೆಟ್ಟೋಯಿತಾ?) ಅಂಕಲ್. ಇಷ್ಟಕ್ಕೆಲ್ಲ ಅಪ್ಪ ಅಮ್ಮ ಯಾಕೆ? ರಾಗಿಣಿ ನಿಮ್ಮ ಪರ್ಮಿಷನ್ ತಗೊಳ್ದೆ ತಪ್ಪು ಮಾಡಿದ್ಲು. ನೀವು ಮನೇಲಿ ಇಷ್ಟು ಸ್ಟ್ರಿಕ್ಟ್ ಅಂತ ಗೊತ್ತಿರ್ಲಿಲ್ಲ.

ಕೃಷ್ಣಪ್ಪ: ಏನೋ ಬೋಳಿ ಮಗನೇ ನಿನ್ ಮಾತಿನ ಅರ್ಥ? ರಾಗಿಣಿ ನಮ್ಮ ಪರ್ಮಿಷನ್ ಕೇಳಬೇಕಿತ್ತ? ತಲೆಲಿ ಲದ್ದಿ ತುಂಬಿದ್ಯಾ ನಿನಗೆ?

ಸುದೀಪ: ಅಂಕಲ್ ಅಂಕಲ್. Sorry. ಇರೀ. ಅಪ್ಪ ಅಮ್ಮನ ಕರಿತೀನಿ.

ಮನೆ ಬಾಗಿಲ ಹೊರಗೆ ಹೋಗಿ ಸುದೀಪನು "ಇದ್ಯಾಕೋ ತುಂಬ ಸೀರಿಯಸ್ ಆದಂಗಿದೆ" ಅಂದುಕೊಂಡು ಅಪ್ಪ ಅಮ್ಮನಿಗೆ ಕಾಲ್ ಮಾಡಿ, ನಡೆದ ಎಲ್ಲಾ ವಿಷಯ ಹೇಳಿ, ಬೇಗನೆ ರಾಗಿಣಿ ಮನೆಗೆ ಬರಲು ಹೇಳಿ, ಮನೆಯ ಲೊಕೇಷನ್ ಅನ್ನು ವಾಟ್ಸಾಪ್ ನಲ್ಲಿ ಶೇರ್ ಮಾಡುತ್ತಾನೆ.

ಅಷ್ಟರಲ್ಲಿ ರಾಗಿಣಿಯು "ನನ್ನ ಮೇಲೆ ನಂಬಿಕೆ ಇಲ್ವಾ ಅಪ್ಪ? ಅಮ್ಮ?" ಎಂದು ಇಬ್ಬರ ಮುಖ ನೋಡಿ ಅಳುತ್ತಾಳೆ.

ರಾಗಿಣಿ: ಸುದೀಪನ ಮನೇಲಿ Non-veg ತಿಂತಾರೆ. ಅದಕ್ಕೆ ಸುದೀಪನ ಬಗ್ಗೆ ನಾನು ನಿಮಗೇನು ಹೇಳಿರಲಿಲ್ಲ. ಹೇಳಿದ್ದಿದ್ದರೆ, ನೀವು ಅವನ ಜೊತೆ ಮಾತಾಡೊದೇ ತಪ್ಪು, ಇನ್ನು ಮನೆಗೆ ಪಾರ್ಟಿಗೆ ಹೋಗ್ತಿನಿ ಅಂದ್ರೆ ಬಿಡ್ತಿರ್ಲಿಲ್ಲ ಅಂತ ಅಂದುಕೊಂಡು ನಿಮ್ಮಿಂದ ವಿಷ್ಯ ಮುಚ್ಚಿಟ್ಟೆ.

ಪಂಕಜ: ಅಯ್ಯೊ ಅಯ್ಯೋ ಏನೆ ನಿನಗೆ ಬಂದಿರೋದು ರೋಗ? ಈಗ ಇವನು ಮನೆ ಒಳಗೆ ಬಂದು ಕೂತಿದ್ದಾನೆ. ಅವನ ಅಪ್ಪ ಅಮ್ಮನೂ ಬರ್ತಾರೆ. ಎಲ್ಲಾ ಹಾಳಾಗಿ ಹೋಯಿತು. ನಾನು ಬದುಕಿರಲ್ಲಾ ಸಾಕು. ಮುದ್ದಾಗಿ ಬೆಳೆಸಿದ್ದಕ್ಕೆ ಒಳ್ಳೆ ಉಡುಗೊರೆನೆ ಕೊಟ್ಟೆ. ನೀನು ಮನೆ ಬಿಟ್ಟು ಹೋಗು.

ಎಂದು ಕೋಪದಿಂದ ಪಂಕಜ ಮಗಳನ್ನು ದೂಡುತ್ತಾಳೆ.

ಕೃಷ್ಣಪ್ಪ: ಸಮಾಧಾನ ಮಾಡ್ಕೊ ಪಂಕಜ. ಇದನ್ನೆಲ್ಲಾ ಹೇಗೆ ಸರಿಮಾಡೋದು ಅಂತ ಯೋಚಿಸಬೇಕು. ಅವಳಿಗೆ ಈಗ ಬುದ್ಧಿ ಹೇಳೊದಕ್ಕೆ ಆಗೊದಿಲ್ಲಾ. ಆಗೋದೆಲ್ಲಾ ಆಗಿಹೋಗಿದೆ. ಮುಂದೇನು ಮಾಡಬೇಕು ಅನ್ನೋದು ಇವನ ಮನೆಯವರೊಂದಿಗೆ ಮಾತಾಡಿ ನಿರ್ಧರಿಸೋಣ.

ದುಃಖದಿಂದ ಸೋಫಾದ ಕೈ ಮೇಲೆ ತನ್ನ ಕೈ ಇಟ್ಟು ತಲೆ ತಗ್ಗಿಸಿ ಸುಮ್ಮನಾಗುತ್ತಾನೆ, ಕೃಷ್ಣಪ್ಪ.

ಸುದೀಪ ಇದನ್ನೆಲ್ಲಾ ನೋಡಿ, "ರಾಗಿಣಿಗೆ ಕೆಲ್ಸ ಕನ್ಫರ್ಮ್ ಆದಮೇಲೆ ಪ್ರಪೋಸ್ ಮಾಡೋಣ ಅಂದುಕೊಂಡಿದ್ನಲ್ಲಾ ಗುರು. ನಮ್ಮ ಮನೆಗೆ ಬಂದಿದ್ದಕ್ಕೆ ಆಕಾಶನೇ ತಲೆ ಮೇಲೆ ಬಿದ್ದಹಾಗೆ ಮಾಡ್ತಿದ್ದಾರೆ. ಇನ್ನು ಪ್ರೀತಿಸ್ತಿದ್ದೀನಿ ಅಂತ ಗೊತ್ತಾದ್ರೆ ಅಷ್ಟೆ ಇವರೆಲ್ಲಾ ಸಾಮೂಹಿಕವಾಗಿ ಸುಸೈಡ್ ಮಾಡ್ಕೊಂಡು ಇದಕ್ಕೆಲ್ಲಾ ನಾನೆ ಕಾರಣ ಅಂತ ಲೆಟ್ಟರ್ ಬರ್ದ್ ಬಿಡ್ತಾರೆ. ಯಪ್ಪ. ವಿಚಿತ್ರ ಗುರು. ಇವಳನ್ನ ಪ್ರಪೋಸ್ ಮಾಡೋ ಕನಸು ಕನಸಾಗೆ ಇರುತ್ತೆ ಅನ್ಸುತ್ತೆ. ದೇವರೇ ನೀನೆ ಕಾಪಾಡ್ಬೇಕಪ್ಪಾ" ಎಂದೆಲ್ಲಾ ಮನಸ್ಸಲ್ಲೆ ಲೆಕ್ಕಚಾರ ಹಾಕೊಳ್ತಾನೆ.

ಏನೂ ಮಾತಾಡದೆ ಸುದೀಪ ಮನೆಯ ಹೊರಗೆಯೇ ನಿಂತು ಅಪ್ಪ ಅಮ್ಮನಿಗೆ ಕಾಯುತ್ತಿರಬೇಕಾದರೆ ರಾಗಿಣಿ ಹೊಸ್ತಿಲ ಹತ್ತಿರ ಬಂದು "ಸುದೀಪ. Sorry ಕಣೊ. ವಿಷ್ಯ ಇಷ್ಟು ದೊಡ್ಡದಾಗುತ್ತೆ ಅಂತ ಅಂದುಕೊಂಡಿರಲಿಲ್ಲ. ಅಪ್ಪ ಅಮ್ಮ Orthodox Level ಇಷ್ಟಿದೆ ಅಂತ ನನಗೂ ಗೊತ್ತಿರ್ಲಿಲ್ಲ." ಎಂದು ಹೇಳುತ್ತಿರಬೇಕಾದರೆ ಸುದೀಪನ ಅಪ್ಪ ಅಮ್ಮ ಬಿಳಿ ವರ್ನಾ ಕಾರಿನಲ್ಲಿ ಬಂದು ಮನೆಯ ಮುಂದೆ ಪಾರ್ಕ್ ಮಾಡುತ್ತಾರೆ.

ಸುದೀಪ ಅಪ್ಪನಿಗೆ ಪಾರ್ಕ್ ಮಾಡಲು ಸಹಾಯ ಮಾಡಿ ಮೂವರು ಮನೆಯ ಬಾಗಿಲ ಕಡೆಗೆ ಹೆಜ್ಜೆ ಇಡುತ್ತಾರೆ.

ಸುದೀಪ: ಅಪ್ಪ. ಒಂದ್ ನಿಮಿಷ. ಇವರು ವೆಜ್. ತುಂಬಾ Orthodox. ಲೆಟ್ ಮಿ ಆಸ್ಕ್ ಅಂಕಲ್.

ಸುದೀಪ ಬಾಗಿಲ ಹೊಸ್ತಿಲ ಹೊರಗೆ ನಿಂತು "ಅಂಕಲ್. ಅಪ್ಪ, ಅಮ್ಮ ಬಂದಿದ್ದಾರೆ." ಎಂದು ಹೇಳಿದಾಗ, ಕೃಷ್ಣಪ್ಪ ಎದ್ದು, ಬಂದವರ ಮುಖ ನೋಡದೆ "ಬನ್ನಿ ಒಳಗೆ. ಕೂತ್ಕೊಳ್ಳಿ." ಎಂದು ಹೇಳಿ, ತಾನು ಬಂದು ಸೋಫಾದ ಮೇಲೆ ಕೂರುತ್ತಾರೆ.

ಕೃಷ್ಣಪ್ಪ: ನೋಡಿ ಸರ್. ನಾನು ಇಲ್ಲೆ ಯುನಿವರ್ಸಿಟಿ ಹೆಡ್ ಆಫಿಸ್ ನಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡ್ತಿರೋದು. ನಾವು ಸರ್ಕಾರಿ ಸಂಬಳದಲ್ಲೇ ಜೀವನ ನಡೆಸಿಕೊಂಡು ಬಂದವರು. ನನ್ನ ಮಗಳು ಒಳ್ಳೆ ಕೆಲಸ ಹುಡುಕಿ ಒಳ್ಳೆ ಹುಡುಗ ಮತ್ತು ಮನೆತನ ಇರೊ ಮನೆಗೆ ಮದುವೆ ಮಾಡಿ ಕೊಡಬೇಕೆಂದು ಕನಸು ಕಂಡವರು. ಈ ಸಮಯದಲ್ಲಿ ಇವಳು ನಿಮ್ಮ ಮಗನ ಜೊತೆ ಸೇರಿ ಹೀಗೆ ಮಾಡಿದ್ದಾಳೆ. ನಮಗೆ ಏನು ಮಾಡ್ಬೇಕು ಅಂತ ಗೊತ್ತಾಗ್ತಿಲ್ಲಾ.

ಸುದೀಪನ ಅಪ್ಪ: ಸರ್ ನಾನು ಸಂಪತ್, ಇವಳು ಲಕ್ಷ್ಮಿ. ನಮಗೆ ಇವರ ಇಬ್ಬರ ಸ್ನೇಹದ ಬಗ್ಗೆ ಬಿಟ್ಟು ಬೇರೆ ಯಾವ ವಿಷಯವು ಗೊತ್ತಿಲ್ಲ. ಮಗ ಪಾಸಾಗೋದೆ ಡೌಟ್

ಅಂದುಕೊಂಡಿದ್ವಿ. ಆದರೆ 80% ತೆಗೆದು ಸರ್ಪ್ರೈಸ್ ಕೊಟ್ಟ. ಅದಕ್ಕೆ ನಾವೂ ಒಂದು ಪಾರ್ಟಿ ಅರೆಂಜ್ ಮಾಡಿದ್ವಿ. ಇವನ 6-7 ಫ್ರೆಂಡ್ಸ್ ಬಂದಿದ್ರು. ಆವಾಗ್ಲೆ ರಾಗಿಣಿ ಇವನ ಓದಿಗೆ ಸಹಾಯ ಮಾಡಿದ್ಲು ಅಂತ ಗೊತ್ತಾಗಿದ್ದು.

ಕೃಷ್ಣಪ್ಪ: ಅದೆಲ್ಲಾ ಓಕೆ. ಆದರೆ ಇಷ್ಟು ದೊಡ್ಡ ವಿಷ್ಯ ಗೊತ್ತಿದ್ದೂ ನಮಗೆ ಮೋಸ ಮಾಡಿದ್ರಿ. ರಾಗಿಣಿ, ಸುದೀಪ ಪ್ರೀತಿಸ್ತಿದ್ದಾರೆ ಅನ್ನೊ ವಿಷ್ಯನಾದ್ರು ತಡಕೊಳ್ತಿದ್ದೆ. ಆದರೆ ಈ ವಿಷ್ಯ ವಿಷ ಕುಡಿದಷ್ಟು ಕಹಿಯಾಗಿದೆ. ನಮಗೆ ಸಾವು ಬಿಟ್ಟರೆ ಬೇರೆ ಯಾವ ದಾರಿನು ಕಾಣಿಸ್ತಿಲ್ಲಾ.

ಸಂಪತ್: ಅರೇ! ನೀವ್ ಹೇಳ್ತಿರೋದು ನೋಡಿದ್ರೆ ಪಾರ್ಟಿ ಮಾಡಿದ್ದಕ್ಕೆ ಕೋಪನೇ ಇಲ್ಲ ಅನ್ನಿಸ್ತಿದೆ. ಬೇರೆ ಏನ್ ವಿಷ್ಯ ಅಂತ ಬಿಡಿಸಿ ಹೇಳಿ.

ಕೃಷ್ಣಪ್ಪ: ನನ್ ಮಗಳು ಪ್ರೆಗ್ನೆಂಟ್. ಇದಕ್ಕೆ ಕಾರಣ ನಿಮ್ಮ ಮಗ.

ಸಂಪತ್, ಲಕ್ಷ್ಮಿ, ರಾಗಿಣಿ ಮತ್ತು ಸುದೀಪ ಎಲ್ಲರೂ ದಿಗ್ಭ್ರಾಂತರಾಗಿ ಒಂದೇ ಸ್ವರದಲ್ಲಿ "ಏನು?" ಎಂದು ಕೂಗುತ್ತಾರೆ.

ಕೃಷ್ಣಪ್ಪ: ಹೌದು. ಇವಳು ಪ್ರೆಗ್ನೆಂಟ್ ಅಂತೆ. ಊರಿಗೆಲ್ಲ ಸುದ್ದಿ ಆಗಿದೆ. ನೆರೆಮನೆಯವರು ಹೇಳಿದರು.

ಸಂಪತ್ ಮತ್ತೆ ಲಕ್ಷ್ಮಿ ಕೋಪದಿಂದ ಮಗನ ಮುಖ ನೋಡುತ್ತಾರೆ. ಮಗನ ಕೆನ್ನೆಗೆ ಬಾರಿಸಲು ಲಕ್ಷ್ಮಿ ಕೈ ಎತ್ತಬೇಕಾದರೆ ರಾಗಿಣಿ "ಒಂದ್ ನಿಮಿಷ. ನಾನು ಸುದೀಪನ ಇಷ್ಟ ಪಡ್ತಿದ್ದೀನಿ ನಿಜ. ಆದ್ರೆ, ಈ ವಿಷ್ಯ ಸುದೀಪನಿಗೂ ಗೊತ್ತಿಲ್ಲ. ಇನ್ನು ಪ್ರೆಗ್ನೆಂಟ್ ಆ! ನಿಮಗೆ ಯಾರು ಹೇಳಿದ್ದು?"

ಸುದೀಪನು ರಾಗಿಣಿಯ ಮಾತನ್ನು ಕೇಳಿ ಸಂತೋಷವಾಗಿ, ದೇವರಿಗೆ ಮನಸ್ಸಿನಲ್ಲೆ “ದೇವರೇ ಸೂಪರ್ ನೀನು. ಗ್ರೀನ್ ಸಿಗ್ನಲ್ ಕೊಟ್ಟು ನನಗೇನೇ ಅಂತ ಸೆಪರೇಟ್ ಫ್ಲೈ ಓವರ್ ಕಟ್ಟಿಸಿರೋಷ್ಟು ಖುಷಿ ಆಯಿತು. ಥಾಂಕ್ಸ್ ಬಾಸ್. ಲವ್ ಯು ಬಾಸ್.” ಎಂದು ಖುಷಿಪಡ್ತಾನೆ.

ಕೃಷ್ಣಪ್ಪ: ನೀನು ಮತ್ತೆ ಸುದೀಪ ಫೋನಲ್ಲಿ ಮಾತಾಡ್ತಿರೋದು ಪಕ್ಕದ ಮನೆ ಗೀತಾಳ ಕಿವಿಗೆ ಬಿದ್ದಿತ್ತು. ಈ ವಿಷಯವನ್ನು ಕೇಶವ ನನಗೆ ಆಫೀಸಿನಲ್ಲಿ ಹೇಳಿದ.

ರಾಗಿಣಿ ಕೋಪದಿಂದ ಮನೆಯಿಂದ ಹೊರಗೆ ಹೋಗಿ ಪಕ್ಕದ ಮನೆಯಲ್ಲಿದ್ದ ಗೀತಾ ಅವರನ್ನು ಕರೆದು “ನಿಮ್ಮೊಂದಿಗೆ ಮಾತನಾಡಬೇಕು. ನಮ್ಮನೆಗೆ ಬನ್ನಿ. ಈಗಲೇ ಬನ್ನಿ” ಎಂದು ಕರೆದುಕೊಂಡು ಬರುತ್ತಾಳೆ. ಬರೀ ಪಂಚೆಯಲ್ಲಿದ್ದ ಕೇಶವ ಶರ್ಟ್ ಹಾಕಿಕೊಂಡು, ಬಟನ್ ಹಾಕೊಳ್ತಾನೆ ನಡೆದುಕೊಂಡು ಕೃಷ್ಣಪ್ಪನ ಮನೆಗೆ ಧಾವಿಸುತ್ತಾನೆ.

ಮನೆಗೆ ಕರೆತಂದ ಗೀತಾಗೆ ರಾಗಿಣಿ “ಆಂಟಿ ನಾನು ಪ್ರೆಗ್ನೆಂಟ್ ಅಂತ ನಿಮಗೆ ನಾನು ಹೇಳಿದ್ನ? ನಿಮಗೆ ಹೇಗೆ ಈ ವಿಷಯ ಗೊತ್ತಾಯ್ತು?”

ಗೀತಾ: ನೆನ್ನೆ ನೆಲಮಂಗಲದಿಂದ ಬರಬೇಕಾದರೆ ನೀನೆ ನನ್ನ ಪಕ್ಕದಲ್ಲಿ, ಫೋನಲ್ಲಿ ಮಾತಾಡ್ತಿದ್ಯಲ್ಲ ಸುದೀಪನ ಜೊತೆ. ಫೋನಲ್ಲಿ ಬರಿ "ಹೂ: ಹಾ:..ಆಹಾ.. ಹ್ಹಾ. ಹ್ಹಾ.. ಹಾ..." ಅಂತ ಮಾತಾಡಿ ಕೊನೆಗೆ Expecting ಅಂದ್ಯಲ್ಲ. ಆಗಲೇ ಗೊತ್ತಾಯ್ತು ನಿಮ್ಮಿಬ್ಬರ ಬಂಡವಾಳ.

ರಾಗಿಣಿ: Expecting ಅಂದ್ರೇನು ಆಂಟಿ?

ಗೀತಾ: ಅದೇ, ನೀನು ಪ್ರೆಗ್ನೆಂಟ್ ಅಂತ ತಾನೆ?

ರಾಗಿಣಿ: ನೀವು ಪೂರ್ತಿ ವಿಷಯ ಕೇಳಿಸಿಕೊಂಡಿಲ್ಲ. ನಾನು ಹೇಳಿದ್ದು "I am expecting the offer letter shortly".

ರಾಗಿಣಿ ತಂದೆಯ ಮುಖ ನೋಡಿ: ನೋಡಪ್ಪ ನಾನು ಪ್ರೆಗ್ನೆಂಟ್ ಅಲ್ಲ. She just assumed things.

ಕೇಶವ: ಸಾರಿ ಕೃಷ್ಣ. ಎರಡು ವಾರದ ಹಿಂದೆ ಮನೆಗೆ ಸೊಸೆ ಜೊತೆ ಮಗ ಬಂದಿದ್ದ. ನಾವಿಬ್ಬರು ಅಜ್ಜ ಅಜ್ಜಿ ಅಗ್ತಿದ್ದೀವಿ ಅನ್ನೋದನ್ನ “She is expecting” ಅಂತ English ನಲ್ಲಿ ಹೇಳಿದ. Expecting ಪದಾನ ಇವಳು ಪ್ರೆಗ್ನೆಂಟ್ ಅಂದುಕೊಂಡ್ಲು. ನಾನೂ ಸರಿಯಾಗಿ ವಿಚಾರಿಸದೆಯೇ ನಿನಗೆ ವಿಷಯ ಹೇಳಿದೆ. ತಪ್ಪಾಯ್ತು ಕಣೋ.

ಕೃಷ್ಣಪ್ಪ ಪಂಕಜ ಇಬ್ಬರೂ ನಿಟ್ಟುಸಿರು ಬಿಟ್ಟರು. ಮುಖದಲ್ಲಿ ನಗು ತುಂಬಿತು.

ಸಂಪತ್: ಸುದೀಪ ನೀನು ರಾಗಿಣಿನಾ ಪ್ರೀತಿಸ್ತಿದ್ಯಾ?

ಸುದೀಪ: ನನಗೂ ರಾಗಿಣಿ ಅಂದ್ರೆ ಇಷ್ಟ. ಆದರೆ, ನಾನು ಅವಳೊಂದಿಗೆ ಎಂದೂ ಇದರ ಬಗ್ಗೆ ಮಾತಾಡಿಲ್ಲ.



ಸಂಪತ್: ಈ ವಿಷಯ ನಿಮ್ಮಿಬ್ಬರಿಗೆ ಬಿಟ್ಟದ್ದು. ನನಗೆ ರಾಗಿಣಿ ಸೊಸೆಯಾಗಿ ನಮ್ಮನೆಗೆ ಬರ್ತಾಳೆ ಅಂದ್ರೆ ನನಗೇನು ಅಭ್ಯಂತರ ಇಲ್ಲ.

ಲಕ್ಷ್ಮಿ: ರಾಗಿಣಿ ತುಂಬಾ ಬುದ್ಧಿವಂತೆ. ಅವಳಿಗೆ ಬಹಳಷ್ಟು ಸಾಧನೆ ಮಾಡಬೇಕನ್ನೊ ಆಸೆ ಇದೆ. ಆ ಸಾಧನೆಯ ಹಾದಿಗೆ ನಾವು ಅಡ್ಡ ಬರೋದಿಲ್ಲ. ಆದರೆ ಸೊಸೆ ಆಗ್ತಾಳೆ ಅಂದ್ರೆ ನಮಗೇನು ಅಭ್ಯಂತರನೂ ಇಲ್ಲ.

ಕೃಷ್ಣಪ್ಪ: ನಮಗೆ ಸ್ವಲ್ಪ ಸಮಯ ಬೇಕು. ಈಗ ಆಗಿರುವ ನಾಟಕಕ್ಕೆ ಗೀತಾ ಅವರೇ ತೆರೆ ಎಳೀಬೇಕು. ಗೀತಾ ಅವರೇ “I am expecting” ಅಂದರೆ "ನಾನು ನಿರೀಕ್ಷಿಸುತ್ತಿದ್ದೇನೆ". ನಮ್ಮ ರಾಗಿಣಿ, ಕಂಪನಿ ಕೊಡುವ ಆಫರ್ ಲೆಟ್ಟರ್ ಅನ್ನು ನಿರೀಕ್ಷಿಸುತ್ತಿದ್ದಳು. ಈ ವಿಷಯವನ್ನೇ ಸುದೀಪನೊಂದಿಗೆ ಹಂಚಿಕೊಂಡಿದ್ದಾಳೆ.

ಗೀತಾ: ನಮ್ಮ ಸೊಸೆ Expecting ಅಂತ ನನ್ನ ಮಗ ಹೇಳಿದ್ದ. ಆಮೇಲೆ ಕನ್ನಡದಲ್ಲಿ ಬಿಡಿಸಿ ಹೇಳಿದ. ಅದಕ್ಕೆ ನಾನು ಇಂಗ್ಲಿಷ್ ನಲ್ಲಿ ಪ್ರೆಗ್ನೆಂಟ್ ಗೆ ಇನ್ನೊಂದು ಪದ Expecting ಅಂತ ಅನ್ಕೊಂಡೆ. ನನ್ನಿಂದ ತಪ್ಪಾಯ್ತು. ನಿಮ್ಮ ಮನೆಯಲ್ಲಿ ಇಷ್ಟು ದೊಡ್ಡ ರಾಮಾಯಣ ನಡೆಯಲು ನಾನೇ ಕಾರಣ. ತಪ್ಪಾಯ್ತು ಕ್ಷಮಿಸ್ಬಿಡಿ.

ಇದರ ಮಧ್ಯೆ ರಾಗಿಣಿಯ ಮೊಬೈಲ್ ರಿಂಗ್ ಅಗುತ್ತದೆ. ರಾಗಿಣಿ ಕಾಲ್ ರಿಸೀವ್ ಮಾಡುತ್ತಾಳೆ. “ಕಂಗ್ರಾಟ್ಸ್ ರಾಗಿಣಿ. ವೀ ಹ್ಯಾವ್ ಸೆಲೆಕ್ಟೆಡ್ ಯು. ಯು ವಿಲ್ ಗೆಟ್ ದ ಆಫರ್ ಲೆಟರ್ ಆನ್ ಯುವರ್ ಈಮೇಲ್. ಪ್ಲೀಸ್ ಚೆಕ್ ಆಂಡ್ ರೆಸ್ಪಾಂಡ್ ಸೂನ್. ಆಲ್ ದಿ ಬೆಸ್ಟ್ ಆಂಡ್ ಮೀಟ್ ಯು ಸೂನ್.” ಎಂದು ಕಂಪೆನಿಯ ಹೆಚ್.ಆರ್. ತಿಳಿಸುತ್ತಾರೆ.

"ಥಾಂಕ್ಸ್ ಸರ್. ಐ ವಿಲ್ ಮೇಕ್ ಶೂರ್ ಟು ರಿಪ್ಲೈ ರೈಟ್ ಅವೇ" ಎಂದು ಹೇಳಿ ಕರೆ ಕಟ್ ಮಾಡಿ. ಮನೇಲಿದ್ದ ಎಲ್ಲರಿಗೂ "ಗುಡ್ ನ್ಯೂಸ್" ಎಂದು ಸಂತೋಷದಿಂದ ಹೇಳುತ್ತಾಳೆ.

ಸುದೀಪ: ಕಂಗ್ರಾಟ್ಸ್ ರಾಗಿಣಿ.

ರಾಗಿಣಿ: ಥಾಂಕ್ಸ್ ಕಣೋ. ಆಂಟಿ "ಗುಡ್ ನ್ಯೂಸ್" ಅಂದರೆ ಪ್ರೆಗ್ನೆಂಟ್ ಗೆ ಇನ್ನೊಂದು ಪದ.

ಎಂದು ಹೇಳಿ ಗೀತಾಳ ಕಾಲೆಳೆಯುತ್ತಾಳೆ.

ರಾಗಿಣಿ: ಐ ಗಾಟ್ ದ ಜಾಬ್. ನನಗೆ ಕೆಲ್ಸಾ ಸಿಕ್ತು. ಹುರ್ರೇ!

ಸಂಪತ್, ಲಕ್ಷಿ ಮತ್ತು ಸುದೀಪ ರಾಗಿಣಿಗೆ ವಿಷ್ ಮಾಡಿ ಹೊರಡುತ್ತಾರೆ.

ಗೀತಾ ಮತ್ತು ಕೇಶವ ಇಬ್ಬರೂ ರಾಗಿಣಿಯ ಕ್ಷಮೆ ಕೇಳಿ, ಕೆಲಸ ಸಿಕ್ಕಿದ್ದಕ್ಕೆ ಶುಭ ಹಾರೈಸಿ ಮನೆಯಿಂದ ಹೊರ ನಡೆಯುವಾಗ ರಾಗಿಣಿ ಓಡಿಬಂದು "ಆಂಟಿ ಒಂದು ನಿಮಿಷ. ನೀವು Sorry ಕೇಳಿದ್ರಿ, ಓಕೆ. ಆದರೆ. ನಾನು ಥ್ಯಾಂಕ್ಸ್ ಹೇಳ್ತಿದ್ದೀನಿ. ನನ್ನ ತುಂಬಾ ಕಷ್ಟಕರವಾದ ವಿಚಾರವನ್ನು ಸುಲಭದಲ್ಲಿ ಬಗೆಹರಿಸಿದ್ದೀರಿ. ತುಂಬಾ ಥ್ಯಾಂಕ್ಸ್ ಆಂಟಿ. I am expecting to get married to Sudeep soon. ಮದುವೆಗೆ ಕರೀತೀನಿ ಎಲ್ರೂ ಬನ್ನಿ."



**ಯಶಸ್ವಿ ಜಿ**
**ಜ್ಞಾನಭಾರತಿ**
**ಬೆಂಗಳೂರು**

# ಗಾದೆಗಳು

1. ಅಡಿ ತಪ್ಪಿದರೆ ಆನೆ ಕೂಡಾ ಉರುಳುತ್ತದೆ.
2. ಅತ್ತೆಯ ಮೇಲಿನ ಕೋಪ ಕೊತ್ತಿಯ ಮೇಲೆ.
3. ಎಲ್ಲರೂ ಅನ್ನವನ್ನು ತಿನ್ನುತ್ತಾರೆ ಹೊರತು ಚಿನ್ನವನ್ನಲ್ಲ.
4. ಎಲ್ಲದಕ್ಕೂ ಅನುಮಾನ ಪಡುವವರ ಬಳಿಗೆ ನೆಮ್ಮದಿ ಸುಳಿಯುವುದು ಅನುಮಾನ.
5. ಜಾತಿ ಜಾತಿ ಎಂದು ಹೊಡೆದಾಡುವವರು ಹಣದಲ್ಲಿ, ಕಾಮದಲ್ಲಿ ಜಾತಿ ನೋಡುವುದಿಲ್ಲ.
6. ಜಾಣನಿಗೆ ಮಾತಿನ ಪೆಟ್ಟು; ಕೋಣನಿಗೆ ಕೋಲಿನ ಪೆಟ್ಟು.
7. ಜಾತಿ ತಪ್ಪಿದರೂ ನೀತಿ ತಪ್ಪಬಾರದು.
8. ಜಾತಿಗೆ ಜಾತಿ ವೈರಿ; ನೀರಿಗೆ ಪಾಚಿ ವೈರಿ.
9. ತನ್ನ ಬೆನ್ನು ತನಗೆ ಕಾಣದು.
10. ಕುಳಿತು ತಿಂದರೆ ಬಂಡಿ ಅನ್ನ ಸಾಲದು.
11. ದುಡ್ಡೇ ದೊಡ್ಡಪ್ಪ; ವಿದ್ಯೆ ಅದರಪ್ಪ.
12. ದೇಶ ಸುತ್ತಿ ನೋಡು; ಕೋಶ ಓದಿ ನೋಡು.
13. ನಿಯಮದಲ್ಲಿ ಇದ್ದರೆ ಯಮನೂ ಹೆದರುವನು.
14. ನೀರಿನಲ್ಲಿ ದೋಣಿ ಇರಬೇಕು; ದೋಣಿಯಲ್ಲಿ ನೀರು ಇರಬಾರದು.
15. ಸೋಮಾರಿಗೆ ಕಳೆಯಲು ಸಮಯ ಸಾಲದು; ಉತ್ಸಾಹಿಗೆ ಕಳೆಯಲು ಸಮಯ ಸಿಗದು.
16. ಯಾವುದನ್ನು ಕದ್ದರೂ ವಿದ್ಯೆಯನ್ನು ಕದಿಯಲಾಗದು.
17. ಯೋಗಿಗೆ ಕುಲವಿಲ್ಲ; ಸಾಗರಕ್ಕೆ ನೆಲೆಯಿಲ್ಲ.
18. ಚಿತೆ ನಿರ್ಜೀವವನ್ನು ಸುಡುತ್ತದೆ; ಚಿಂತೆ ಸಜೀವವನ್ನು ಸುಡುತ್ತದೆ.
19. ಚಿಂತೆಯಿಂದ ರೋಗ; ಶಾಂತಿಯಿಂದ ಯೋಗ.
20. ಮಣದಷ್ಟು ಮಾತಿಗಿಂತ ಕಣದಷ್ಟು ಕೃತಿ ಮೇಲು.



**(ಸಂಗ್ರಹ)**
**ಚಂದ್ರಶೇಖರ ಶೆಟ್ಟಿಗಾರ್ ಪಿ.**
**ಆರ್.ಟಿ. ನಗರ, ಬೆಂಗಳೂರು**

# ವಾಚಕರವಾಣಿ

ಶೆಟ್ಟಿಗಾರವಾಣಿ ಚಂದ ಬಂದಿದೆ.
AI ಚಿತ್ರಗಳು ಸೂಪರ್ 👌 👌 💐 💐

**ರಮೇಶ್ ಶೆಟ್ಟಿಗಾರ್**
**ಮಂಜೇಶ್ವರ**

ಪತ್ರಿಕೆಯ ಓದುಗರು ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿಕೆ

**shettigaravani@gmail.com**
**Mob. No. 9845660131**

# ಶೆಟ್ಟಿಗಾರ ವಾಣಿ

## ಸಮಾಜ ಬಾಂಧವರ ಅವಗಾಹನೆಗಾಗಿ

1. ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವ **ಶೆಟ್ಟಿಗಾರ ವಾಣಿ** ತನ್ನ ಪ್ರಕಟಣೆಯನ್ನು ಪ್ರಾರಂಭಿಸಿ ಪ್ರಗತಿ ಪಥದಲ್ಲಿದ್ದು ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿದೆ.

2. ಸಮಾಜ ಬಾಂಧವರು ಬರೆದಿರುವ ಕಥೆ, ಕವನ, ಪ್ರಬಂಧ, ಪ್ರವಾಸ ಕಥನಗಳು, ವೈಚಾರಿಕ ಲೇಖನಗಳು, ವೃತ್ತಿ ಮತ್ತು ಜೀವನ ಅನುಭವ ಗಾಥೆಗಳು, ನಗೆ ಬರಹಗಳು, ವ್ಯಂಗ್ಯ ಮತ್ತು ರೇಖಾಚಿತ್ರಗಳು ಮೊದಲಾದ ವಿಭಿನ್ನ ಸಾಹಿತ್ಯ ಕೃತಿಗಳನ್ನು ಸ್ವೀಕರಿಸಲಾಗುವುದು.

3. **ಮಕ್ಕಳು ತಾವೇ ರಚಿಸಿದ ಚಿತ್ರ, ಸಣ್ಣಕಥೆ, ಕವನ ಮತ್ತು ಇತರ ಲೇಖನಗಳನ್ನು ಕಳುಹಿಸಬಹುದು. ಮಕ್ಕಳ ರಚನೆಗಳಿಗೆ ವಿಶೇಷ ಆದ್ಯತೆ ನೀಡಲಾಗುವುದು.**

4. ಆಯ್ಕೆಯಾದ ಬರಹಗಳನ್ನು ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

5. ಬರಹಗಳ ಆಯ್ಕೆ ಮತ್ತು ಪ್ರಕಟಣೆಯ ವಿಷಯದಲ್ಲಿ ಪತ್ರಿಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

6. ಲೇಖಕರು ತಮ್ಮ ಹೆಸರು, ವಿಳಾಸ, ಭಾವಚಿತ್ರ ಮತ್ತು ಕಿರು ಪರಿಚಯವನ್ನು ಲೇಖನದೊಂದಿಗೆ ನಮೂದಿಸಬೇಕು.

7. ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಸಲಹೆ ಸೂಚನೆಗಳನ್ನು ಸಾದರದಿಂದ ಸ್ವೀಕರಿಸಲಾಗುವುದು.

**ಆಸಕ್ತರು ತಮ್ಮ ಬರಹಗಳನ್ನು (WORD FILE) ಇಮೇಲ್ ಮೂಲಕ ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ (ಹೆಚ್ಚಿನ ಮಾಹಿತಿ, ವಿವರ ಮತ್ತು ನಿಮ್ಮ ಅನಿಸಿಕೆಗಳಿಗೆ ಸಂಪರ್ಕಿಸಿ):**


**shettigaravani@gmail.com**
ವಾಟ್ಸಪ್ ನಂ. 9845660131


**ಶೆಟ್ಟಿಗಾರವಾಣಿ**ಯ ಮೊದಲ ಸಂಪುಟದ ಎಲ್ಲಾ **12 ಸಂಚಿಕೆಗಳು** ಕೂಟದ ವೆಬ್ಸೈಟ್‌ನಲ್ಲಿ ಡೌನ್ ಲೋಡ್ ಮಾಡಿ ಓದಬಹುದು.

**www.dkpadmashalibng.in/shettigaravani**

June 2025

May 2025

April 2025

March 2025

February 2025

January 2025


December 2024

November 2024

October 2024

September 2024

August 2024

July 2024


ಮೇಲಿರುವ ಪತ್ರಿಕೆಯ ಚಿತ್ರವನ್ನು ಒತ್ತಿದರೆ ಸಂಚಿಕೆ ಡೌನ್ ಲೋಡ್ ಆಗುವುದು.